بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 06

ಸಂಚಿಕೆ: 23

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

05 ಜೂನ್ 2025, 25 ಇಹ್‌ಸಾನ್ 1404 ಹಿಜರಿ ಶಮ್ಸಿ,
08 ಝುಲ್‌ಹಜ್ಜ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ الَّذِیْ فَرَضَ
عَلَیْكَ الْقُرْاٰنَ لَرَآدُّكَ
اِلٰی مَعَادٍ

**(ಅಲ್ ಖಸಸ್: 86)**

**ಅಂದರೆ: ನಿನ್ನ ಮೇಲೆ ಖುರ್‌ಆನಿನ ಅಧ್ಯಾಪನೆಗಳನ್ನು ಕಡ್ಡಾಯಗೊಳಿಸಿದವನು ಖಂಡಿತವಾಗಿಯೂ ನಿನ್ನನ್ನು ಮರಳಬೇಕಾದ ಸ್ಥಳಕ್ಕೆ ಮರಳಿಸುವನು.**

ಇಸ್ಲಾಮಿನ ಆತ್ಮವು ಎಷ್ಟೊಂದು ಶಕ್ತಿಯುತವಾಗಿದೆ ಎಂದರೆ ಅನ್ಯ ಸಮುದಾಯದವರನ್ನು ಇಸ್ಲಾಮಿನಲ್ಲಿ ಪ್ರವೇಶಿಸಲು ವಿವಶರನ್ನಾಗಿ ಮಾಡುತ್ತದೆ. ದೊಡ್ಡ ದೊಡ್ಡ ಬ್ರಿಟಿಷ್ ವಿದ್ವಾಂಸರು ಈ ವಿಷಯವನ್ನು ಒಪ್ಪಿಕೊಳ್ಳುತ್ತಾರೆ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಲ್ಲಾಹನಿಂದ ಸುಧಾರಣೆ ಬಯಸುವುದು ಮತ್ತು ತನ್ನ ಶಕ್ತಿಯನ್ನು ಖರ್ಚು ಮಾಡುವುದು ವಿಶ್ವಾಸದ ರೀತಿಯಾಗಿದೆ. ಹದೀಸಿನಲ್ಲಿ ಹೀಗೆ ಬರುತ್ತದೆ: ಯಾರು ಭರವಸೆದೊಂದಿಗೆ ತನ್ನ ಕೈಗಳನ್ನು ಪ್ರಾರ್ಥನೆಗಾಗಿ ಎತ್ತುತ್ತಾನೋ ಅವನ ಪ್ರಾರ್ಥನೆ ರದ್ದುಗೊಳಿಸುವುದಿಲ್ಲ. ಆದುದರಿಂದ ನಿಷ್ಠೆ ಹಾಗೂ ಭರವಸೆದೊಂದಿಗೆ ಅಲ್ಲಾಹನಂದ ಬೇಡಿಕೊಳ್ಳಿರಿ. ಮತ್ತೊಮ್ಮೆ ನನ್ನ ಇದೇ ಉಪದೇಶವಾಗಿದೆ ಒಳ್ಳೆಯ ನಡತೆ ತೋರಿಸುವುದು ಪವಾಡ ತೋರಿಸಿದಂತೆಯೇ ಆಗಿದೆ. ಯಾವೊಬ್ಬ ವ್ಯಕ್ತಿ ತಾನು ಪವಾಡ ಪುರುಷನಾಗಲು ಬಯಸುವುದಿಲ್ಲವೆಂದಾದರೆ, ನೆನಪಿರಲಿ ಶೈತಾನನು ಅವನನ್ನು ವಂಚಿಸುತ್ತಾನೆ. ಪವಾಡ ಎಂದರೆ ಅಧ್ಭುತ ಅಥವಾ ಚಮತ್ಕಾರ ಎಂದಲ್ಲ. ಪವಾಡದಿಂದ ಇಸ್ಲಾಮಿನ ಸತ್ಯ ಹಾಗೂ ವಾಸ್ತವ ತಿಳಿಯುವುದಾಗಿದೆ. ಆ ಮೂಲಕ ಸನ್ಮಾರ್ಗ ಲಭಿಸುತ್ತದೆ. ನಾನು ಮತ್ತೊಮ್ಮೆ ನಿಮಗೆ ತಿಳಿಯ ಪಡಿಸುತ್ತೇನೆ. ಅದ್ಭುತ ಹಾಗೂ ಚಮತ್ಕಾರಗಳಿಂದ ಒಳಗೂಡಿದ ಕಾರ್ಯ ಪವಾಡವಲ್ಲ. ಅದು ನೈತಿಕತೆಗೆ ಸೇರುವುದಿಲ್ಲ. ಹಾಗಾಗಿ ಅದು ಶೈತಾನನ ಊಹೆ ಮಾತ್ರವಾಗಿದೆ. ನೋಡಿರಿ!! ಕೋಟ್ಯಾಂತರ ಭೂಮಿಯ ವಿವಿಧ ಸ್ಥಳಗಳಲ್ಲಿ ವಾಸವಾಗಿರುವ ಮುಸ್ಲಿಮರು ಬಲವಂತವಾಗಿ ಖಡ್ಗದ ಬಲದಿಂದ ಬಂದಿರುವರೇ? ಇದು ಸರ್ವಥಾ ತಪ್ಪು ಅಭಿಪ್ರಾಯವಾಗಿದೆ. ಇದು ಇಸ್ಲಾಮಿನ ಪವಾಡಾತ್ಮಕ ಗುಣಗಳು ಅವರನ್ನು ಸೆಳೆದುಕೊಂಡಿದೆ.

ಪವಾಡಗಳು ವಿವಿಧ ರೀತಿಯದ್ದಾಗಿರುತ್ತವೆ. ನೀತಿವಂತಿಕೆಯು ಪವಾಡಗಳಲ್ಲೊಂದಾಗಿದೆ. ಅದು ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ಸನ್ನು ಕಾಣುತ್ತದೆ. ಮುಸ್ಲಿಮರಾದವರು ಕೇವಲ ಸಜ್ಜನರ ಪವಾಡವನ್ನೇ ಕಂಡಿರುತ್ತಾರೆ. ಅವರ ಪರಿಣಾಮ ಬೀರುತ್ತದೆ. ಅವರು ಇಸ್ಲಾಮಿನ ಘನತೆ ಗೌರವವನ್ನು ಕಂಡಿದ್ದಾರೆಯೇ ಹೊರತು ಖಡ್ಗವನ್ನಲ್ಲ. ದೊಡ್ಡ ದೊಡ್ಡ ಬ್ರಿಟಿಷ್ ವಿದ್ವಾಂಸರು ಈ ಮಾತನ್ನು ಒಪ್ಪಿಕೊಳ್ಳುತ್ತಾರೆ. ಇಸ್ಲಾಮಿನ ಆತ್ಮವು ಎಷ್ಟೊಂದು ಶಕ್ತಿಯುತವಾಗಿದೆ ಎಂದರೆ ಅನ್ಯ ಸಮುದಾಯದವರನ್ನು ಇಸ್ಲಾಮಿನಲ್ಲಿ ಪ್ರವೇಶಿಸಲು ವಿವಶರನ್ನಾಗಿ ಮಾಡುತ್ತದೆ.

**(ಮಲ್‌ಫೂಝಾತ್, ಸಂಪುಟ–1, ಪುಟ–125, ಖಾದಿಯಾನ್ 2018)**

ಮಹಿಳೆಯರ ಎಲ್ಲಾ ಚಟುವಟಿಕೆಗಳು ಖಲೀಫರು ಸಿದ್ಧಪಡಿಸಿದ ಯೋಜನೆಗಳಂತೆ ಇರಬೇಕು. ಹಾಗೂ ಅವರ ಪ್ರಗತಿಗಳಿಗೋಸ್ಕರ ಇರಬೇಕು.

ಮಕ್ಕಳ ತರಬೇತಿಯ ವಿಷಯದಲ್ಲಿ ತಮ್ಮ ಹೊಣೆಗಾರಿಕೆಯನ್ನು ತಿಳಿದಿರಬೇಕು, ಅವರಿಗೆ ಕಷ್ಟಗಳನ್ನು ಸಹಿಸುವಂತೆ ತರಬೇತಿ ನೀಡಬೇಕು. ಧರ್ಮದ ಸಮಸ್ಯೆಗಳ ಕುರಿತು ಮಾಹಿತಿ ನೀಡಬೇಕು, ಅವರಲ್ಲಿ ಅಲ್ಲಾಹ್, ಪ್ರವಾದಿ(ಸ), ಮಸೀಹ್ ಮೌಊದ್ ಮತ್ತು ಖಲೀಫರೊಡನೆ ಪ್ರೀತಿ ಹಾಗೂ ಅನುಸರಣೆಯ ಭಾವನೆ ಬೆಳೆಸಬೇಕು. ಅವರಿಗೆ ಜೀವಿತಾರ್ಪಣೆ ಮಾಡುವ ಉತ್ಸಾಹ ನೀಡಬೇಕು.

ಜಮಾಅತ್ತಿನ ಐಕ್ಯತೆಗಾಗಿ ಅವರು ಧರ್ಮ ಬೋಧಿಸಿದ ಶಿಕ್ಷಣದಂತೆ ಎಲ್ಲಾ ರೀತಿಯ ತ್ಯಾಗಗಳಿಗಾಗಿ ಸಿದ್ಧರಾಗಿರಬೇಕು. ನೈತಿಕ ಹಾಗೂ ಆಧ್ಯಾತ್ಮಿಕ ಸುಧಾರಣೆ ಮತ್ತು ಅದರ ಮಾರ್ಗಗಳ ಕುರಿತು ಚಿಂತನೆಯಲ್ಲಿರಬೇಕು.

## ಲಜ್‌ನಾ ಇಮಾಅಲ್ಲಾಹ್, ಹಾಲ್ಯಾಂಡಿನ 50ನೇ ಕನಕ ಮಹೋತ್ಸವದ ಸಂದರ್ಭದಲ್ಲಿ ಪ್ರಕಟವಾದ 'ಖದೀಜ' ಪತ್ರಿಕೆಯ ವಿಶೇಷಾಂಕಕ್ಕೆ ಸಯ್ಯದುನಾ ಹಝ್ರತ್ ಅಮೀರುಲ್ ಮುಮಿನೀನ್‌ರವರು ನೀಡಿದ ವಿಶೇಶ **ಸಂದೇಶ**

ಹಾಲ್ಯಾಂಡಿನ ಪ್ರೀತಿಯ ಲಜ್‌ನಾ ಇಮಾಅಲ್ಲಾಹ್ ಸದಸ್ಯರೇ!

**ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತಹು.**

ಲಜ್‌ನಾ ಇಮಾಅಲ್ಲಾಹ್, ಹಾಲ್ಯಾಂಡ್ ತನ್ನ ಸ್ಥಾಪನೆಯ 50 ವರ್ಷವನ್ನು ಪೂರ್ಣಗೊಳಿಸಿದ ನಿಮಿತ್ತ ಜ್ಯುಬಿಲಿಯನ್ನು ಆಚರಿಸುತ್ತಿದೆ ಮತ್ತು ಈ ಸಂದರ್ಭದಲ್ಲಿ ಪತ್ರಿಕೆ 'ಖದೀಜ'ದ ವಿಶೇಷಾಂಕವನ್ನು ಪ್ರಕಟಿಸುತ್ತಿದೆ ಎಂದು ತಿಳಿದು ತುಂಬ ಸಂತೋಷವಾಗಿದೆ. ಅಲ್ಲಾಹನು ಎಲ್ಲಾ ರೀತಿಯಲ್ಲಿ ಅನುಗ್ರಹಿಸುವಂತಾಗಲಿ. ಆಮೀನ್

ಈ ಸುವರ್ಣ ಸಂದರ್ಭದಲ್ಲಿ ಮುಕರ್‍ರಮ ಸದರ್ ಸಾಹಿಬ ಲಜ್‌ನಾ ಇಮಾಅಲ್ಲಾಹ್‌ರವರು ನನ್ನಲ್ಲಿ ಒಂದು ಸಂದೇಶವನ್ನು ಕಳಿಹಿಸಲು ಮನವಿ ಮಾಡಿಕೊಂಡಿದ್ದರು. ಆದುದರಿಂದ ಅವರಿಗೆ ನನ್ನ ಸಂದೇಶವೇನೆಂದರೆ – ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಿಳಿಸಿದ ಪ್ರಕಾರ ಈ ಸಂಘಟನೆಯ ಉದ್ದೇಶ ತನ್ನ ನಡತೆ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಪಡೆಯುವುದಾಗಿದೆ ಮತ್ತು ಖಲೀಫರೊಂದಿಗೆ ಆಳವಾದ ಸಂಬಂಧ ಹೊಂದುವುದಾಗಿದೆ. ಸಂಘಟನೆಯ ಈ ಉದ್ದೇಶವನ್ನು ನಾವು ದೃಷ್ಟಿಯಲ್ಲಿರಿಸಿ ಕೊಳ್ಳಬೇಕಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ತಾ 25ನೇ ಡಿಸಂಬರ್, 1922ರಂದು ಲಜ್‌ನಾ ಇಮಾಅಲ್ಲಾಹ್‌ವನ್ನು ಸ್ಥಾಪಿಸಿದರು. ಅವರು ಒಂದು ಲೇಖನವನ್ನು ಬರೆದು ಅದರಲ್ಲಿ ಖಾದಿಯಾನಿನ ಅಹ್ಮದಿ ಮಹಿಳೆಯರಿಗೆ ಈ ಕೆಳಗಿನ ಮಾತುಗಳನ್ನು ತಿಳಿಸಿ ಇದರ ಉದ್ದೇಶಗಳನ್ನು ಮನಗಂಡು, ಪರಸ್ಪರ ಒಗ್ಗೂಡಿ ಕೆಲಸ ಮಾಡುವಂತೆ ಹೇಳಿದರು.

*(ಪುಟ ಸಂಖೆ 12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಈ ರಮಝಾನ್‌ನಲ್ಲಿ ನಾವು ಆರಾಧನೆಗಳ ಬಗ್ಗೆ ಗಮನ ಹರಿಸುತ್ತೇವೆ ಮತ್ತು ಉನ್ನತ ನೈತಿಕತೆಗಳ ಬಗ್ಗೆ ಗಮನ ಹರಿಸುತ್ತೇವೆ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುತ್ತೇವೆ ಮತ್ತು ಅಲ್ಲಾಹನ ತೌಹೀದನ್ನು ಹರಡುತ್ತೇವೆ ಎಂದು ಪ್ರತಿಜ್ಞೆ ಮಾಡುವುದರೊಂದಿಗೆ ಹಾಗೆ ಮಾಡಲು ನಾವು ಪ್ರಯತ್ನಿಸಬೇಕು ಮತ್ತು ಈ ಪ್ರಯತ್ನವು ಈ ರಮಝಾನ್ ಮುಗಿದ ನಂತರ ಕೊನೆಗೊಳ್ಳಬಾರದು. ಬದಲಾಗಿ ವರ್ಷಪೂರ್ತಿ ಮುಂದುವರೆಯಬೇಕು.

ರಮಝಾನ್ ಎಷ್ಟು ಮುಖ್ಯವೋ, ಪ್ರತಿಯೊಂದು ನಮಾಝ್ ಮತ್ತು ಪ್ರತಿಯೊಂದು ಜುಮಾ ಸಹ ಅಷ್ಟೇ ಮುಖ್ಯವಾಗಿದೆ. ರಮಝಾನ್‌ನ ಕೊನೆಯ ಜುಮಾ ಮಾತ್ರ ಅನುಗ್ರಹೀತವಾಗಿದೆ ಎಂದಲ್ಲ, ಪ್ರತಿಯೊಂದು ಜುಮಾ ಅನುಗ್ರಹೀತವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತ್ ಅಲ್ಲಾಹನೊಂದಿಗೆ ನಿಜವಾದ ಸಂಬಂಧವನ್ನು ಬೆಳೆಸಬೇಕು ಮತ್ತು ನಮ್ಮ ನಂಬಿಕೆಯ ಶಕ್ತಿಯನ್ನು ದೃಢನಂಬಿಕೆಯ ಮಟ್ಟಕ್ಕೆ ತಲುಪಿಸಲು ಪ್ರಯತ್ನಿಸಬೇಕು. ಇದೇ ಉದ್ದೇಶಕ್ಕಾಗಿ ನಾನು ಬಂದಿದ್ದೇನೆ ಮತ್ತು ಈ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸದಿದ್ದರೆ, ನನ್ನ ಬೈಅತ್‌ನಿಂದ ಯಾವುದೇ ಪ್ರಯೋಜನವಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ನಾನು ಕಿಶ್ತಿ ನೂಹ್ ಎಂಬ ಪುಸ್ತಕವನ್ನು ಬರೆದಿದ್ದೇನೆ. ಈ ಕಿಶ್ತಿ ನೂಹನ್ನು ಪದೇ ಪದೇ ಓದಿರಿ. ಅದರಲ್ಲಿ ನಿಮಗಾಗಿ ಉಪದೇಶಗಳಿವೆ ಮತ್ತು ನೀವು ಅದನ್ನು ಪದೇ ಪದೇ ಓದುವಾಗ ಮತ್ತು ಉಪದೇಶಗಳನ್ನು ಪಾಲಿಸುವಾಗ ಮತ್ತು ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶಗಳಿಗೆ ಅನುಗುಣವಾಗಿ ಅದರಲ್ಲಿ ಬರೆಯಲಾದ ಆದೇಶಗಳನ್ನು ನೋಡಿ ನಿಮ್ಮ ಜೀವನವನ್ನು ರೂಪಿಸಲು ಪ್ರಯತ್ನಿಸುವಾಗ, ಆಗ ಅದೇ ನಿಮ್ಮ ಯಶಸ್ವಿ ಜೀವನ ಮತ್ತು ಅದೇ ವಿಷಯವು ನಿಮ್ಮ ಬೈಅತ್‌ನ ಪ್ರಯೋಜನವನ್ನು ನೀಡುತ್ತದೆ.

ನಮ್ಮ ಆರಾಧನೆಗಳು ರಮಝಾನಿನ ದಿನಗಳಲ್ಲಿ ಮಾತ್ರ ಅಲ್ಲಾಹನಿಗಾಗಿ ನಡೆಯುತ್ತಿವೆಯೇ? ನಾವು ಯಾವಾಗಲೂ ನಮ್ಮ ಜೀವನದಲ್ಲಿ ಈ ಆರಾಧನೆಗಳನ್ನು ನಮ್ಮ ಜೀವನದ ಭಾಗವಾಗಿಸಲು ಬಯಸುತ್ತೇವೆಯೇ ಮತ್ತು ಮಾಡುತ್ತಿದ್ದೇವೆಯೇ? ಇದು ಇಲ್ಲದಿದ್ದರೆ, ಏನೂ ಇಲ್ಲ. ನಾವು ಇದನ್ನು ಮಾಡುತ್ತಿರುವುದಾದರೆ ನಾವು ತಾಳ್ಮೆಯಿಂದ ಅಲ್ಲಾಹನ ಇಚ್ಛೆಗೆ ತೃಪ್ತರಾಗಿರುವುದಾದರೆ ಮತ್ತು ದುಆಗಳನ್ನು ಪ್ರಾರ್ಥನೆಗಳನ್ನು ಸಹ ಮಾಡುತ್ತಿರುವವರಾದರೆ ಆಗ ಅಲ್ಲಾಹನು ಶತ್ರುಗಳಿಂದ ನಮ್ಮನ್ನು ರಕ್ಷಿಸುತ್ತಾನೆ. ಈ ಕಷ್ಟಗಳಿಂದ ಅಲ್ಲಾಹನು ನಿಮ್ಮನ್ನು ಹೇಗೆ ರಕ್ಷಿಸುತ್ತಾನೆ ಎಂಬುದನ್ನು ನೀವು ನೋಡುವಿರಿ.

ತಾಳ್ಮೆಯು ಸಹ ಒಂದು ಆರಾಧನೆಯಾಗಿದೆ. ಲೆಕ್ಕವಿಲ್ಲದಷ್ಟು ಪ್ರತಿಫಲಗಳು ತಾಳ್ಮೆಯುಳ್ಳವರಿಗೆ ಸಿಗುತ್ತವೆ ಎಂದು ಅಲ್ಲಾಹನು ಹೇಳುತ್ತಾನೆ.

ಪ್ರಾರಂಭದಲ್ಲಿ ನಿಜವಾದ ಮುಸ್ಲಿಮರು ತಾಳ್ಮೆಯಿಂದಿರಬೇಕಾಗುತ್ತದೆ ಎಂದು ಇತಿಹಾಸವು ಹೇಳುತ್ತದೆ. ಸಹಾಬಿಯರ(ರ) ಮೇಲೂ ಅಂತಹ ಸಮಯ ಬಂದಿತ್ತು, ಅವರು ಎಲೆಗಳನ್ನು ತಿಂದು ಜೀವನ ಸಾಗಿಸುತ್ತಿದ್ದರು. ಕೆಲವೊಮ್ಮೆ ರೊಟ್ಟಿಯ ತುಂಡು ಕೂಡ ಸಿಗುತ್ತಿರಲಿಲ್ಲ. ಅಲ್ಲಾಹನು ಒಳಿತು ಮಾಡಲು ಇಚ್ಛಿಸಿದರೆ ಮಾತ್ರ ಮನುಷ್ಯನು ಇನ್ನೊಬ್ಬರಿಗೆ ಒಳಿತು ಮಾಡಲು ಸಾಧ್ಯ, ಇಲ್ಲವಾದಲ್ಲಿ ಸಾಧ್ಯವಿಲ್ಲ.

ಪರಿಶುದ್ಧನಾಗಲು ನಮಾಝ್ ಷರತ್ತು ಮತ್ತು ಈ ರಮಝಾನ್‌ನಲ್ಲಿ ನಾವು ನಿಯಮಿತವಾಗಿ ನಮಾಝ್ ನಿರ್ವಹಿಸುವ ಮತ್ತು ಅದರ ಬಗ್ಗೆ ಗಮನ ಹರಿಸುವ ಲಾಭವನ್ನು ಪಡೆದಿದ್ದೇವೆ, ನಫ್‌ಲ್‌ಗಳ ಬಗ್ಗೆ ಗಮನ ಹರಿಸಿದ್ದೇವೆ. ಶೈತಾನನಿಂದ ಸ್ಥಾಯಿಯಾಗಿ ತಪ್ಪಿಸಿಕೊಳ್ಳಲು ಮತ್ತು ತಖ್ವದ ಮಾರ್ಗದಲ್ಲಿ ನಡೆಯಲು, ಆರಾಧನೆಯ ಬಗ್ಗೆ ಗಮನ ಹರಿಸುವುದು ಷರತ್ತು.

ತಖ್ವವುಳ್ಳವನಾಗಲು, ವ್ಯಭಿಚಾರ, ಕಳ್ಳತನ, ಹಕ್ಕುಗಳ ಉಲ್ಲಂಘನೆ, ತೋರಿಕೆ, ಅಹಂಕಾರ, ತಿರಸ್ಕಾರ, ಜಿಪುಣತನ ಮುಂತಾದ ದೊಡ್ಡ ವಿಷಯಗಳನ್ನು ತ್ಯಜಿಸಿದ ನಂತರ, ಕೆಟ್ಟ ಸ್ವಭಾವಗಳಿಂದ ದೂರವಿರಬೇಕು ಮತ್ತು ಅವುಗಳಿಗೆ ಬದಲಾಗಿ ಉತ್ತಮ ಸ್ವಭಾವಗಳನ್ನು ಬೆಳೆಸಬೇಕು.

**ಪವಿತ್ರ ಮಾಸ ರಮಝಾನ್‌ನ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆಗಳ ಬೆಳಕಿನಲ್ಲಿ ಅಹ್ಮದೀಯರಿಗೆ ಸಲಹೆಗಳ ವಿಶ್ವಾಸ ವರ್ಧಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **‘ಮಸ್ಜಿದ್ ಮುಬಾರಕ್’** ನಿಂದ **28–03–2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ - اَلرَّحْمٰنِ الرَّحِيمِ - مٰلِكِ يَوْمِ الدِّينِ -

إِيَّاكَ نَعْبُدُ وَإِيَّاكَ نَسْتَعِينُ - اِهْدِنَا الصِّرَاطَ الْمُسْتَقِيمَ -

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ -

ಈ ರಮಝಾನಿನಿಂದ ಸಾಗುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದ್ದಾನೆ ಮತ್ತು ಇಂದು ಈ ರಮಝಾನಿನ ಕೊನೆಯ ಜುಮಾ ಆಗಿದೆ. ಅಲ್ಲಾಹನ ಕೃಪೆಯಿಂದ ನಮ್ಮಲ್ಲಿ ಅನೇಕರಿಗೆ ಆರಾಧನೆ ಮಾಡಲು ಮತ್ತು ಉಪವಾಸ ಇರಿಸಲು ಸೌಭಾಗ್ಯ ಲಭಿಸಿದೆ. ಆದರೆ ರಮಝಾನ್‌ನಲ್ಲಿ ಉಪವಾಸ ಇರಿಸುವುದು ಅಥವಾ ಆರಾಧನೆ ಮಾಡುವುದರಿಂದ ಮಾತ್ರ ನಮ್ಮ ಉದ್ದೇಶ ಪೂರ್ಣಗೊಳ್ಳುವುದಿಲ್ಲ ಎಂಬುದನ್ನು ಗಮನದಲ್ಲಿಡಬೇಕು. ಬದಲಿಗೆ, ನೀವು ಸದಾ ನನ್ನ ಆರಾಧಕರಾಗಿರಬೇಕು ಮತ್ತು ನನ್ನ ಆರಾಧನೆಯ ಹಕ್ಕನ್ನು ಪೂರೈಸಲು ಪ್ರಯತ್ನಿಸಬೇಕು ಎಂದು ಅಲ್ಲಾಹನು ನಮ್ಮೊಡನೆ ಉಪದೇಶಿಸಿದ್ದಾನೆ. ಆದ್ದರಿಂದ, ಈ ದಿನಗಳಲ್ಲಿ ನಮಾಝ್‌ಗಳತ್ತ ಗಮನಹರಿಸಲು, ಜಮಾಅತಾಗಿ ನಮಾಝ್ ಮಾಡಲು, ನಫ್‌ಲ್ ನಮಾಝ್ ನಿರ್ವಹಿಸಲು, ಪವಿತ್ರ ಕುರ್‌ಆನ್ ಓದಲು ಮತ್ತು ಅದರ ಪ್ರಕಾ ನಡೆಯಲು

ಸೌಭಾಗ್ಯ ಸಿಕ್ಕಿದವರು ಈಗ ಈ ಒಳಿತುಗಳನ್ನು ಮುಂದುವರಿಸುವುದು ಅವರ ಕರ್ತವ್ಯವಾಗಿದೆ. ಅಲ್ಲಾಹನು ಮನುಷ್ಯನ ಜನ್ಮದ ಉದ್ದೇಶವೆಂದು ತಿಳಿಸಿದ ಗುರಿಯನ್ನು ನಾವು ಈ ಒಳಿತುಗಳನ್ನು ಮುಂದುವರಿಸುವಾಗ ಮಾತ್ರ ಸಾಧಿಸಲು ಸಾಧ್ಯವಾಗುತ್ತದೆ ಮತ್ತು ಈ ಕಾಲದಲ್ಲಿ ನಾವು ಹಝ್ರತ್ ಪೈಗಂಬರ್(ಸ)ರೊಡನೆ ಮಾಡಲಾದ ಪ್ರತಿಜ್ಞೆಯನ್ನು ನವೀಕರಿಸಿದ್ದೇವೆ. ಆದ್ದರಿಂದ, ಇದರಂತೆ ಕಾರ್ಯನಿರ್ವಹಿಸಲು ನಾವು ನಮ್ಮ ಸಂಪೂರ್ಣ ಪ್ರಯತ್ನವನ್ನು ಮುಂದುವರಿಸಬೇಕು ಹಾಗೂ ಇಂದು ಮತ್ತು ರಮಝಾನ್‌ನ ಉಳಿದ ಎರಡು ಮೂರು ದಿನಗಳು ಅಥವಾ ಎರಡು ದಿನಗಳಲ್ಲಿಯೂ ಅಲ್ಲಾಹನು ಈ ರಮಝಾನ್‌ನ ಅನುಗ್ರಹದಿಂದ ಮುಂದೆಯೂ ಈ ಒಳಿತುಗಳನ್ನು ಮುಂದುವರಿಸಲು ನಮಗೆ ಅವಕಾಶ ನೀಡಲಿ ಎಂದು ಪ್ರಾರ್ಥಿಸಬೇಕು ಮತ್ತು ಅಲ್ಲಾಹನ ಆದೇಶದಂತೆ ನಾವು ನಿರ್ವಹಿಸಿದ ಈ ಒಳಿತುಗಳನ್ನು ರಮಝಾನ್ ನಂತರ ಮರೆಯಬಾರದು, ಏಕೆಂದರೆ ಹಝ್ರತ್ ಪೈಗಂಬರ್(ಸ)ರ ಆದೇಶದಂತೆ ಒಬ್ಬ ಸತ್ಯವಿಶ್ವಾಸಿಯು ಒಂದು ನಮಾಝ್‌ನಿಂದ ಇನ್ನೊಂದು ನಮಾಝ್ ವರೆಗೆ, ಒಂದು ಜುಮಾದಿಂದ ಇನ್ನೊಂದು ಜುಮಾದ ವರೆಗೆ, ಒಂದು ರಮಝಾನ್‌ನಿಂದ ಇನ್ನೊಂದು ರಮಝಾನ್‌ನ ವರೆಗೆ ಚಿಂತಿಸುತ್ತಾನೆ. ಅಂದರೆ, ಅವು ಬರುವವರೆಗೆ ಅವನು ಕಾಯುತ್ತಾನೆ ಮತ್ತು ನಾನು ಮತ್ತೆ ಆ ಆರಾಧನೆಯನ್ನು ಮಾಡುತ್ತೇನೆ ಮತ್ತು ಈ ಅವಧಿಯಲ್ಲಿ ಅಲ್ಲಾಹನು ಮಾಡಲು ಆದೇಶಿಸಿದ ಒಳಿತುಗಳನ್ನು ಮಾಡುತ್ತೇನೆ. ಈ ಅವಧಿಯಲ್ಲಿ ಸಣ್ಣ ಸಣ್ಣ ತಪ್ಪುಗಳು ಮತ್ತು ಪಾಪಗಳಿಗೆ ಈ ಆರಾಧನೆಗಳು ಪ್ರಾಯಶ್ಚಿತ್ತವಾಗುತ್ತವೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. (ಸಹೀಹ್ ಮುಸ್ಲಿಮ್, ಕಿತಾಬುತ್ತಹಾರ........, ಹದೀಸ್–233)

ರಮಝಾನ್ ಎಷ್ಟು ಮುಖ್ಯವೋ, ಪ್ರತಿಯೊಂದು ನಮಾಝ್ ಮತ್ತು ಪ್ರತಿಯೊಂದು ಜುಮಾ ಸಹ ಅಷ್ಟೇ ಮುಖ್ಯವಾಗಿದೆ. ರಮಝಾನ್‌ನ ಕೊನೆಯ ಜುಮಾ ಮಾತ್ರ ಅನುಗ್ರಹೀತವಾಗಿದೆ ಎಂದಲ್ಲ, ಪ್ರತಿಯೊಂದು ಜುಮಾ ಅನುಗ್ರಹೀತವಾಗಿದೆ. ಈ ಕಾಲದಲ್ಲಿ, ನಾನು ಹೇಳಿದಂತೆ, ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿದನು ಮತ್ತು ಅವರನ್ನು ನಂಬುವ ಸೌಭಾಗ್ಯ ನಮಗೆ ಸಿಕ್ಕಿದೆ. ನಾವು ಹೇಗೆ ನಿಜವಾದ ಮುಸ್ಲಿಮರಾಗಬಹುದು, ನಿಜವಾಗಿಯೂ ಅಲ್ಲಾಹನ ಆರಾಧಕರಾಗಬಹುದು, ಹಝ್ರತ್ ಪೈಗಂಬರ್(ಸ)ರ ಅನುಯಾಯಿಗಳಾಗಬಹುದು ಎಂದು ಅವರು ತಮ್ಮ ಜಮಾಅತಿಗೆ ಅಸಂಖ್ಯಾತ ಉಪದೇಶಗಳನ್ನು ನೀಡಿದರು. ಆದ್ದರಿಂದ, ನಾವು ಈ ವಿಷಯಗಳನ್ನು ನೆನಪಿನಲ್ಲಿಡಬೇಕು.

ಒಂದು ಸಂದರ್ಭದಲ್ಲಿ ಅವರು ಉಪದೇಶ ನೀಡುತ್ತಾ ಹೀಗೆ ಹೇಳಿದರು: ನಾನು ನನ್ನ ಜಮಾಅತಿನ ಸಹೋದರರಿಗೆ ಹಲವು ಬಾರಿ ಹೇಳಿದ್ದೇನೆ, ನೀವು ನನ್ನ ಬೈಅತ್ತಿನ ಮೇಲೆ ಮಾತ್ರ ಭರವಸೆ ಇರಿಸಬೇಡಿ, ಅದರ ಸತ್ಯವನ್ನು ನೀವು ಅರಿಯುವ ವರೆಗೆ ನಿಮಗೆ ಮೋಕ್ಷವಿಲ್ಲ. ಸಿಪ್ಪೆಯ ಮೇಲೆ ತೃಪ್ತಿ ಹೊಂದುವವನು ತಿರುಳಿನಿಂದ ವಂಚಿತನಾಗುತ್ತಾನೆ. ಶಿಷ್ಯನು ಸ್ವತಃ ಕಾರ್ಯನಿರ್ವಹಿಸದಿದ್ದರೆ, ಗುರುವಿನ ಶ್ರೇಷ್ಠತೆಯಿಂದ ಅವನಿಗೆ ಯಾವುದೇ ಪ್ರಯೋಜನವಿಲ್ಲ. ನಾನು ಒಬ್ಬ ಪೀರ್‌ನಿಂದ ಬೈಅತ್ ಮಾಡಿದ್ದೇನೆ, ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಬೈಅತ್‌ನಲ್ಲಿ ಸೇರಿಕೊಂಡಿದ್ದೇನೆ, ಈಗ ನನಗೆ ಬಹಳಷ್ಟು ಸಿಕ್ಕಿದೆ ಎಂದು ಹೇಳುವುದು ಸರಿಯಲ್ಲ. ನಾವು ಸ್ವತಃ ಕಾರ್ಯನಿರ್ವಹಿಸುವವರಾಗುವ ವರೆಗೂ ಈ ಬೈಅತ್‌ನಿಂದ ನಮಗೆ ಯಾವುದೇ ಪ್ರಯೋಜನವಿಲ್ಲ. ಅವರು ಉದಾಹರಣೆ ನೀಡುತ್ತಾ ಹೇಳುತ್ತಾರೆ: ಯಾರಾದರೂ ವೈದ್ಯರ ಬಳಿಗೆ ಹೋದರೆ ಮತ್ತು ವೈದ್ಯರು ಮದ್ದನ್ನು ಬರೆದು ಕೊಟ್ಟರೆ, ರೋಗಿ ಆ ಮದ್ದನ್ನು ತೆಗೆದುಕೊಂಡು ಹೋದರೆ ಮಾತ್ರ ಯಾವುದೇ ಪ್ರಯೋಜನವಾಗುವುದಿಲ್ಲ. ಆ ವೈದ್ಯರ ಬರೆದು ಕೊಟ್ಟ ಮದ್ದನ್ನು ಅಥವಾ ಆ ವೈದ್ಯನ ಔಷಧಿಯಿಂದ ಪ್ರಯೋಜನ ಪಡೆಯುವಾಗ ಮಾತ್ರ ಪ್ರಯೋಜನವಾಗುತ್ತದೆ, ಆ ಔಷಧಿಗಳನ್ನು ಬಳಸಬೇಕಾಗುವುದು. ಆದ್ದರಿಂದ, ನಾನು ಕಿಶ್ತಿ ನೂಹ್ ಎಂಬ ಪುಸ್ತಕವನ್ನು ಬರೆದಿದ್ದೇನೆ. ಈ ಕಿಶ್ತಿ ನೂಹನ್ನು ಪದೇ ಪದೇ ಓದಿರಿ. ಅದರಲ್ಲಿ ನಿಮಗಾಗಿ ಉಪದೇಶಗಳಿವೆ ಮತ್ತು ನೀವು ಅದನ್ನು ಪದೇ ಪದೇ ಓದುವಾಗ ಮತ್ತು ಉಪದೇಶಗಳನ್ನು ಪಾಲಿಸುವಾಗ ಮತ್ತು ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶಗಳಿಗೆ ಅನುಗುಣವಾಗಿ ಅದರಲ್ಲಿ ಬರೆಯಲಾದ ಆದೇಶಗಳನ್ನು ನೋಡಿ ನಿಮ್ಮ ಜೀವನವನ್ನು ರೂಪಿಸಲು ಪ್ರಯತ್ನಿಸುವಾಗ, ಆಗ ಅದೇ ನಿಮ್ಮ ಯಶಸ್ವಿ ಜೀವನ ಮತ್ತು ಅದೇ ವಿಷಯವು ನಿಮ್ಮ ಬೈಅತ್‌ನ ಪ್ರಯೋಜನವನ್ನು ನೀಡುತ್ತದೆ.

**ಖದ್ ಅಫ್ಲಹ ಮನ್ ಝಕ್ಕಾಹ** ಅಂದರೆ ಪರಿಶುದ್ಧನಾದವನು ಯಶಸ್ವಿಯಾಗುತ್ತಾನೆ, ಎಂದು ಅಲ್ಲಾಹನು ಹೇಳುತ್ತಾನೆ. ತನ್ನ ನಫ್ಸ್ ಎಂದರೆ ಆತ್ಮವನ್ನು ಪರಿಶುದ್ಧ ಮಾಡಿದವನು ಗುರಿಯನ್ನು ಸಾಧಿಸಿದನು. ನೀವು ಅದರಂತೆ ಕಾರ್ಯನಿರ್ವಹಿಸುವಾಗ ಮಾತ್ರ ನಿಮಗೆ ಪ್ರಯೋಜನವಾಗುತ್ತದೆ. ಸಾವಿರಾರು ಕಳ್ಳರು, ವ್ಯಭಿಚಾರಿಗಳು, ದುಷ್ಟರು, ಕುಡುಕರು, ಗೂಂಡಾಗಳು ಸ್ವತಃ ನಾವು ಹಝ್ರತ್ ಪೈಗಂಬರ್(ಸ)ರ ಅನುಯಾಯಿಗಳು ಎಂದು ಹೇಳಿಕೊಳ್ಳುತ್ತಾರೆ, ಆದರೆ ನಿಜವಾಗಿಯೂ ಅವರು ಹಾಗಿದ್ದಾರೆಯೇ? ಅವರು ಹಝ್ರತ್ ಪೈಗಂಬರ್(ಸ)ರ ಅನುಯಾಯಿಗಳೆಂದು ಕರೆಸಿಕೊಳ್ಳಲು ಹಕ್ಕನ್ನು ಹೊಂದಿದ್ದಾರೆಯೇ? ಖಂಡಿತವಾಗಿಯೂ ಇಲ್ಲ. ಹಝ್ರತ್ ಪೈಗಂಬರ್(ಸ)ರ ಬೋಧನೆಗಳನ್ನು ಸಂಪೂರ್ಣವಾಗಿ ಅನುಸರಿಸುವವನೇ ಅನುಯಾಯಿ. ಬೋಧನೆಗಳನ್ನು ಅನುಸರಿಸದಿದ್ದರೆ, ಅವನು ಅನುಯಾಯಿ ಎಂದು ಕರೆಸಿಕೊಳ್ಳಲು ಸಾಧ್ಯವಿಲ್ಲ.

(ಮಲ್‌ಫೂಝಾತ್, ಸಂಪುಟ–4, ಪುಟ–232–233, 1984)

ಇದು ಹಝ್ರತ್ ಪೈಗಂಬರ್(ಸ)ರನ್ನು ಅವಮಾನಿಸುವ ವಿಷಯವಾಗಿದೆ. ಆದ್ದರಿಂದ, ಇಸ್ಲಾಮಿ ಬೋಧನೆಗಳಿಗೆ ಅನುಗುಣವಾಗಿ, ಅಲ್ಲಾಹನ ಆದೇಶಗಳಿಗೆ ಅನುಗುಣವಾಗಿ, ಹಝ್ರತ್ ಪೈಗಂಬರ್(ಸ) ನಮಗೆ ಮಾರ್ಗದರ್ಶನ ನೀಡಿದ ವಿಷಯಗಳಿಗೆ ಅನುಗುಣವಾಗಿ ಮತ್ತು ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಗಮನ ನೀಡಲು ಹೇಳಿದ ವಿಷಯಗಳಿಗೆ ಅನುಗುಣವಾಗಿ ನಾವು ನಮ್ಮ ಕಾರ್ಯಗಳನ್ನು ರೂಪಿಸಿಕೊಳ್ಳಬೇಕು ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ಈ ಜಮಾಅತಿಗೆ ಸೇರಿದರೆ ಅದರ ಬೋಧನೆಗಳನ್ನು ಅನುಸರಿಸಬೇಕು ಜಮಾಅತಿಗೆ ಸೇರಿದ ನಂತರ ಕಷ್ಟಗಳು ಕೂಡ ಬರುತ್ತವೆ, ಕಷ್ಟಗಳು ಬರದಿದ್ದರೆ ಪ್ರತಿಫಲ ಹೇಗೆ ಸಿಗಲು ಸಾಧ್ಯ? ಹಝ್ರತ್ ಪೈಗಂಬರ್(ಸ) ಮಕ್ಕಾದಲ್ಲಿ ಹದಿಮೂರು ವರ್ಷಗಳ ಕಾಲ ಕಷ್ಟ ಅನುಭವಿಸಿದರು ಮತ್ತು ಆ ಕಾಲದ ಕಷ್ಟಗಳು ಏನಾಗಿತ್ತು ನಿಮಗೆ ಗೊತ್ತಿಲ್ಲ. ಆದ್ದರಿಂದ, ಕಷ್ಟಗಳು ಖಂಡಿತವಾಗಿಯೂ ಬರುತ್ತವೆ ಎಂಬುದನ್ನು ಯಾವಾಗಲೂ ನೆನಪಿಡಿ, ಆದರೆ ಈ ಕಷ್ಟಗಳು ಮಕ್ಕಾದಲ್ಲಿ ಸಹಾಬಿಯರಿಗೂ ಮತ್ತು ಹಝ್ರತ್ ಪೈಗಂಬರ್(ಸ)ರಿಗೂ ಬಂದಾಗಲೂ ಹಝ್ರತ್ ಪೈಗಂಬರ್(ಸ) ತಾಳ್ಮೆಯನ್ನು ಕಲಿಸಿದರು ಮತ್ತು ಇದರ ಫಲಿತಾಂಶವೇನಾಯಿತು? ಫಲಿತಾಂಶವೆಂದರೆ, ಅಂತಿಮವಾಗಿ ಶತ್ರುಗಳು ನಾಶವಾದರು. ನಿಮ್ಮ ವಿರೋಧ ಮಾಡುವ ಈ ದುಷ್ಟ ಜನರು ಕೂಡ ಆ ಸಮಯದಲ್ಲಿ ಇರಲಾರರು ಎಂದು ನೀವು ನೋಡುವಿರಿ.

ಇಂದಿನ ಪರಿಸ್ಥಿತಿಯೂ ಇದೇ ಆಗಿದೆ. ಈ ಜಮಾಅತನ್ನು ಜಗತ್ತಿನಲ್ಲಿ ಹರಡಲು ಅಲ್ಲಾಹನು ತೀರ್ಮಾನಿಸಿದ್ದಾನೆ. ನೀವು ಕೆಲವೇ ಸಂಖ್ಯೆಯಲ್ಲಿ ಇರುವುದನ್ನು ಕಂಡು ಅವರು ನಿಮಗೆ ಕಷ್ಟ ಕೊಡುತ್ತಾರೆ, ಆದರೆ ಜಮಾಅತ್ ವಿಸ್ತಾರಗೊಳ್ಳುವಾಗ ಅವರು ತಾವಾಗಿಯೇ ಮೌನವಾಗುತ್ತಾರೆ. ಇದೇ ಜಗತ್ತಿನ ನಿಯಮ ಮತ್ತು ಇದನ್ನೇ ಪ್ರವಾದಿಗಳ ಜಮಾಅತಿನ ಚರಿತ್ರೆಯಲ್ಲಿ ನಾವು ನೋಡಿದ್ದೇವೆ. ಅಲ್ಲಾಹನು ಇಚ್ಛಿಸಿದ್ದರೆ, ಈ ಜನರು ಕಷ್ಟ ಕೊಡುತ್ತಿರಲಿಲ್ಲ ಮತ್ತು ಕಷ್ಟ ಕೊಡುವವರನ್ನು ಹುಟ್ಟುಹಾಕುತ್ತಿರಲಿಲ್ಲ, ಆದರೆ ಅವರ ಮೂಲಕ ಅಲ್ಲಾಹನು ನಮಗೆ ತಾಳ್ಮೆಯನ್ನು ಕಲಿಸಲು ಬಯಸುತ್ತಾನೆ. ಅಲ್ಲಾಹನು ಎಲ್ಲ ಶಕ್ತಿಗಳ ಒಡೆಯ, ಅವನು ಈ ದುಷ್ಟರ ಕೈಗಳನ್ನು ತಡೆಯಬಹುದು, ಆದರೆ ನಮ್ಮಲ್ಲಿ ಎಷ್ಟು ತಾಳ್ಮೆ ಇದೆ ಮತ್ತು ನಾವು ಅಲ್ಲಾಹನೊಂದಿಗೆ ಎಷ್ಟು ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೆ ಎಂಬುದನ್ನು ಅವನು ನಮ್ಮನ್ನು ಪರೀಕ್ಷಿಸಲು ಬಯಸುತ್ತಾನೆ. ನಮ್ಮ ಆರಾಧನೆಗಳು ರಮಝಾನಿನ ದಿನಗಳಲ್ಲಿ ಮಾತ್ರ ಅಲ್ಲಾಹನಿಗಾಗಿ ನಡೆಯುತ್ತಿವೆಯೇ? ನಾವು ಯಾವಾಗಲೂ ನಮ್ಮ ಜೀವನದಲ್ಲಿ ಈ ಆರಾಧನೆಗಳನ್ನು ನಮ್ಮ ಜೀವನದ ಭಾಗವಾಗಿಸಲು ಬಯಸುತ್ತೇವೆಯೇ ಮತ್ತು ಮಾಡುತ್ತಿದ್ದೇವೆಯೇ? ಇದು ಇಲ್ಲದಿದ್ದರೆ, ಏನೂ ಇಲ್ಲ. ನಾವು ಇದನ್ನು ಮಾಡುತ್ತಿರುವುದಾದರೆ ನಾವು ತಾಳ್ಮೆಯಿಂದ ಅಲ್ಲಾಹನ ಇಚ್ಛೆಗೆ ತೃಪ್ತರಾಗಿರುವುದಾದರೆ ಮತ್ತು ದುಆಗಳನ್ನು ಪ್ರಾರ್ಥನೆಗಳನ್ನು ಸಹ ಮಾಡುತ್ತಿರುವರಾದರೆ ಆಗ ಅಲ್ಲಾಹನು ಶತ್ರುಗಳಿಂದ ನಮ್ಮನ್ನು ರಕ್ಷಿಸುತ್ತಾನೆ. ಈ ಕಷ್ಟಗಳಿಂದ ಅಲ್ಲಾಹನು ನಿಮ್ಮನ್ನು ಹೇಗೆ ರಕ್ಷಿಸುತ್ತಾನೆ ಎಂಬುದನ್ನು ನೀವು ನೋಡುವಿರಿ.

ತಾಳ್ಮೆಯು ಸಹ ಒಂದು ಆರಾಧನೆ. ತಾಳ್ಮೆಯು ಸಹ ಒಂದು ಆರಾಧನೆಯಾಗಿದೆ. ಲೆಕ್ಕವಿಲ್ಲದಷ್ಟು ಪ್ರತಿಫಲಗಳು ತಾಳ್ಮೆಯುಳ್ಳವರಿಗೆ ಸಿಗುತ್ತವೆ ಎಂದು ಅಲ್ಲಾಹನು ಹೇಳುತ್ತಾನೆ. ಅಂದರೆ, ಅವರ ಮೇಲೆ ಅಸಂಖ್ಯಾತ ಅನುಗ್ರಹಗಳು ಉಂಟಾಗುತ್ತವೆ. ಈ ಪ್ರತಿಫಲವು ಕೇವಲ ತಾಳ್ಮೆಯುಳ್ಳವರಿಗೆ ಮಾತ್ರ. ಇತರ ಆರಾಧನೆಗಳಿಗೆ ಅಲ್ಲಾಹನು ಈ ಭರವಸೆ ನೀಡಿಲ್ಲ. ಒಬ್ಬ ವ್ಯಕ್ತಿಯು ಒಂದು ಜಮಾಅತ್‌ನಲ್ಲಿ ಜೀವಿಸುವಾಗ, ಅವನಿಗೆ ಪದೇ ಪದೇ ಕಷ್ಟಗಳು ಬರುವಾಗ, ಅಂತಿಮವಾಗಿ ಬೆಂಬಲಿಸುವ, ಸಹಾಯ ಮಾಡುವ ಅಲ್ಲಾಹನ ಕೋಪಕ್ಕೆ ಅದು ಕಾರಣವಾಗುತ್ತದೆ ಮತ್ತು ಅಲ್ಲಾಹನ ಅಭಿಮಾನ ಕಷ್ಟ ಕೊಡುವವನನ್ನು ನಾಶಮಾಡುತ್ತದೆ. ಅಂದರೆ, ನಾವು ತಾಳ್ಮೆಯಿಂದಿದ್ದು ಅವನ ಮುಂದೆ ತಲೆಬಾಗಿ ದುಆ ಮಾಡುವಾಗ ಅಲ್ಲಾಹನ ಅಭಿಮಾನಕ್ಕೆ ಅದು ಕಾರಣವಾಗುತ್ತದೆ. ಕೆಲವರು ತಾಳ್ಮೆಯಿಲ್ಲದವರಂತೆ ವರ್ತಿಸುತ್ತಾರೆ.

ಹೌದು ಕೆಲವು ಸ್ಥಳಗಳಲ್ಲಿ ಬಹಳ ಕಷ್ಟಗಳಿವೆ. ವಿಶೇಷವಾಗಿ ಪಾಕಿಸ್ತಾನದಲ್ಲಿ, ಆದರೆ ಅಲ್ಲಾಹನು ನಮ್ಮಿಂದ ಇದನ್ನೇ ನಿರೀಕ್ಷಿಸಿದ್ದಾನೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ತಾಳ್ಮೆಯಿಂದಿರಲು ಹೇಳಿದ್ದಾರೆ. ನಾವು ಈ ರಮಝಾ?ನಿನಲ್ಲಿ ಕೇವಲ ದುಆಗಳನ್ನು ಮಾಡಿದ್ದೇವೆ ಎಂದು ಹೇಳುವುದಲ್ಲ. ಬದಲಾಗಿ ನಾವು ಈ ಪ್ರಾರ್ಥನೆಗಳನ್ನು ಮತ್ತು ಈ ಸತ್ಕರ್ಮಗಳನ್ನು ನಮ್ಮ ಜೀವನದ ಸ್ಥಾಯಿಯಾದ ಭಾಗವಾಗಿಸಿದರೆ ಮಾತ್ರ ನಮಗೆ ಪ್ರಯೋಜನವಾಗುವುದು. ನಮ್ಮ ಜಮಾಅತ್ ಅಲ್ಲಾಹನ ಬೆಂಬಲದಲ್ಲಿದೆ ಮತ್ತು ಕಷ್ಟಗಳನ್ನು ಅನುಭವಿಸುವುದರಿಂದ ನಂಬಿಕೆ ಬಲಗೊಳ್ಳುತ್ತದೆ. (ಮಲ್‌ಫೂಝಾತ್, ಸಂಪುಟ–4, ಪುಟ–235, 1984)

ಈ ವಿಷಯಗಳನ್ನು ನಾವು ನೆನಪಿನಲ್ಲಿಟ್ಟರೆ ಇನ್ಶಾ ಅಲ್ಲಾಹ್ ನಾವು ಪ್ರಗತಿ ಹೊಂದುತ್ತಲೇ ಇರುವೆವು ಮತ್ತು ಶತ್ರುಗಳು ನಮ್ಮ ಕಾರ್ಯಗಳಲ್ಲಿ ಯಾವುದೇ ಅಡಚಣೆಯನ್ನು ಉಂಟುಮಾಡಲು ಸಾಧ್ಯವಿಲ್ಲ. ಯೋಜನೆಗಳಲ್ಲಿ ಯಾವುದೇ ಅಡಚಣೆಯನ್ನು ಉಂಟುಮಾಡಲು ಸಾಧ್ಯವಿಲ್ಲ. ಆದರೆ ನಮ್ಮ ಸ್ವಂತ ಸತ್ಕರ್ಮಗಳು ಮತ್ತು ನಾವು ಎಲ್ಲವನ್ನೂ ಅಲ್ಲಾಹನ ಇಚ್ಛೆಗಾಗಿ ಮಾಡುವವರಾಗಿದ್ದರೆ ಮಾತ್ರ ಇದು ಸಾಧ್ಯ. ಒಂದೆಡೆ ಅವರು(ಅ) ಹೇಳುತ್ತಾರೆ:

ನೀವು ಲೌಕಿಕರಾಗಿರಬೇಡಿ, ಬದಲಾಗಿ ಅಲ್ಲಾಹನ ಕಡೆಗೆ ಗಮನ ಹರಿಸಿ ಮತ್ತು ನೀವು ಅಲ್ಲಾಹನ ಕಡೆಗೆ ಗಮನ ಹರಿಸುವಾಗ, ಅಲ್ಲಾಹನು ನಿಮ್ಮ ಕಷ್ಟಗಳನ್ನು ದೂರಮಾಡುತ್ತಾನೆ ಎಂಬುದನ್ನು ನೋಡಿ. ತಖ್ವದ ಬಗ್ಗೆ ಉಪದೇಶಿಸುತ್ತಾ ಹೀಗೆ ಹೇಳಿದರು:

ಪ್ರಾರಂಭದಲ್ಲಿ ನಿಜವಾದ ಮುಸ್ಲಿಮರು ತಾಳ್ಮೆಯಿಂದಿರಬೇಕಾಗುತ್ತದೆ ಎಂದು ಇತಿಹಾಸವು ಹೇಳುತ್ತದೆ. ಸಹಾಬಿಯರ(ರ) ಮೇಲೂ ಅಂತಹ ಸಮಯ ಬಂದಿತ್ತು, ಅವರು ಎಲೆಗಳನ್ನು ತಿಂದು ಜೀವನ ಸಾಗಿಸುತ್ತಿದ್ದರು. ಕೆಲವೊಮ್ಮೆ ರೊಟ್ಟಿಯ ತುಂಡು ಕೂಡ ಸಿಗುತ್ತಿರಲಿಲ್ಲ. ಅಲ್ಲಾಹನು ಒಳಿತು ಮಾಡಲು ಇಚ್ಛಿಸಿದರೆ ಮಾತ್ರ ಮನುಷ್ಯನು ಇನ್ನೊಬ್ಬರಿಗೆ ಒಳಿತು ಮಾಡಲು ಸಾಧ್ಯ, ಇಲ್ಲವಾದಲ್ಲಿ ಸಾಧ್ಯವಿಲ್ಲ. ಅಲ್ಲಾಹನು ಒಳಿತು ಮಾಡಲು ಇಚ್ಛಿಸಿದರೆ ಮಾತ್ರ ಮನುಷ್ಯರಿಂದಲೂ ಒಳಿತುಗಳು ನಡೆಯುತ್ತವೆ. ಮನುಷ್ಯನು ತಖ್ವವನ್ನು ಕೈಗೊಳ್ಳುವಾಗ, ಅಲ್ಲಾಹನು ಅವನಿಗಾಗಿ ಬಾಗಿಲುಗಳನ್ನು ತೆರೆಯುತ್ತಾನೆ. ಜನರು ನಿಮಗೆ ಒಳಿತು ಮಾಡುತ್ತಾರೆ ಎಂದು ನೀವು ಭಾವಿಸುತ್ತೀರಿ, ಆದರೆ ಅಲ್ಲಾಹನು ಒಳಿತು ಮಾಡಲು ಇಚ್ಛಿಸದಿದ್ದರೆ, ನೀವು ಎಷ್ಟೇ ಪ್ರಯತ್ನಿಸಿದರೂ ಜನರು ಒಳಿತು ಮಾಡಲು ಸಾಧ್ಯವಿಲ್ಲ. ಒಳಿತಿನ ಮಾರ್ಗದಲ್ಲಿ ನಡೆಯಲು ಅಲ್ಲಾಹನ ಕಡೆಗೆ ತಲೆಬಾಗುವುದು ಅವಶ್ಯಕ ಮತ್ತು ಅವನ ಒಲವು ದೊರೆಯುವಾಗ ಮತ್ತು ನಾವು ತಖ್ವದ ಮಾರ್ಗದಲ್ಲಿ ನಡೆಯಲು ಪ್ರಾರಂಭಿಸುವಾಗ ಅಲ್ಲಾಹನು ತನ್ನ ಅನುಗ್ರಹದ ಬಾಗಿಲುಗಳನ್ನು ತೆರೆಯುತ್ತಾನೆ, ಇನ್ಶಾ ಅಲ್ಲಾಹ್. ಆದ್ದರಿಂದ, ಅಲ್ಲಾಹನಲ್ಲಿ ನಿಜವಾದ ನಂಬಿಕೆ ಇಡಬೇಕು. ಇದರಿಂದ ಎಲ್ಲವನ್ನೂ ಪಡೆಯಬಹುದು, ಏಕೆಂದರೆ ಅಲ್ಲಾಹನು ಹೇಳುತ್ತಾನೆ: **"ಮನ್ ಯತ್ತಕಿ ಅಲ್ಲಾಹ ಯಜ್‌ಅಲ್ ಲಹು ಮಖ್ರಜ ವ ಯರ್ಝುಖು ಮಿನ್ ಹೈಸು ಲಾ ಯಹ್ತಸಿಬ್'**. (ಅತ್ತಲಾಖ್: 3:4) (ಮಲ್‌ಫೂಝಾತ್, ಸಂಪುಟ–4, ಪುಟ–204, 1984)

ಯಾರು ಅಲ್ಲಾಹನ ತಖ್ವವನ್ನು ಕೈಕೊಳ್ಳುತ್ತಾರೋ, ಅಲ್ಲಾಹನು ಅವರಿಗಾಗಿ ಒಂದು ಮಾರ್ಗವನ್ನು ತೆರೆಯುತ್ತಾನೆ ಮತ್ತು ಎಲ್ಲಿಂದ ಬರುತ್ತದೆ ಎಂದು ಅವರು ಊಹಿಸದ ಸ್ಥಳದಿಂದ ಅವರಿಗೆ ಉಪಜೀವನವನ್ನು ನೀಡುತ್ತಾನೆ. ಅವರು ಎಲ್ಲಿಂದ ನಿರೀಕ್ಷೆ ಇರುವುದಿಲ್ಲವೋ ಅಲ್ಲಿಂದ ಸೌಲಭ್ಯಗಳನ್ನು ಒದಗಿಸುತ್ತಾನೆ. ಆದ್ದರಿಂದ, ನಾವು ನಮ್ಮ ಜೀವನವನ್ನು ಯಶಸ್ವಿಗೊಳಿಸಲು ಮತ್ತು ಈ ರಮಝಾನ್‌ನಿಂದ ಅಥವಾ ಪ್ರತಿ ರಮಝಾನ್‌ನಿಂದ ಪ್ರಯೋಜನ ಪಡೆಯಲು ಈ ವಿಷಯಗಳನ್ನು ನಾವು ನೆನಪಿನಲ್ಲಿಡಬೇಕು. ಮಾನವರ ಹಕ್ಕುಗಳ ಬಗ್ಗೆಯೂ ಹಝ್‌ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ: ಒಟ್ಟಿಗೆ ಕುಳಿತುಕೊಳ್ಳಿ. ನೀವು ಪರಸ್ಪರ ಎಷ್ಟು ಪ್ರೀತಿಸುತ್ತೀರೋ, ಅಲ್ಲಾಹನು ನಿಮ್ಮನ್ನು ಅಷ್ಟೇ ಪ್ರೀತಿಸುತ್ತಾನೆ.

(ಮಲ್‌ಫೂಝಾತ್, ಸಂಪುಟ–4, ಪುಟ–228, 1984)

ಕೇವಲ ಬಾಹ್ಯ ಆರಾಧನೆಗಳಲ್ಲ, ರಮಝಾನಿನ ದಿನಗಳಲ್ಲಿ ಅನೇಕ ಜನರಲ್ಲಿ ಉನ್ನತ ನೈತಿಕತೆಯನ್ನು ಪ್ರದರ್ಶಿಸುವತ್ತ ಗಮನವು ಉಂಟಾಗುತ್ತದೆ. ಈಗ ನಾವು ಈ ಉನ್ನತ ನೈತಿಕತೆಗಳನ್ನು ಯಾವಾಗಲೂ ಮುಂದುವರಿಸುವುದು ಮತ್ತು ಸಣ್ಣ ಸಣ್ಣ ವಿಷಯಗಳಲ್ಲಿ, ಸಣ್ಣ ಸಣ್ಣ ಜಗಳಗಳಲ್ಲಿ, ಸಣ್ಣ ಸಣ್ಣ ಸಮಸ್ಯೆಗಳಲ್ಲಿ ಉಂಟಾಗುವ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿ ಪ್ರೀತಿ ಮತ್ತು ಪ್ರೀತಿಯ ಜೀವನವನ್ನು ನಡೆಸುವುದು ಅವಶ್ಯಕವಾಗಿದೆ. ನಾವು ಇದನ್ನು ಮಾಡುವಾಗ, ಅಲ್ಲಾಹನ ಅನುಗ್ರಹದ ಮಳೆಯು ನಮ್ಮ ಮೇಲೆ ಸುರಿಯುತ್ತದೆ.

ಒಂದೆಡೆ ಅವರು ಉಪದೇಶಿಸುತ್ತಾ ಹೀಗೆ ಹೇಳಿದರು: ನಮ್ಮ ಜಮಾಅತಿಗೆ ಈ ಸಂಕಷ್ಟಗಳ ಕಾಲದಲ್ಲಿ, ಎಲ್ಲ ಕಡೆ ದುರ್ಮಾರ್ಗ, ಅಸಡ್ಡೆ ಮತ್ತು ತಪ್ಪು ಮಾರ್ಗದ ಗಾಳಿ ಬೀಸುತ್ತಿರುವಾಗ ತಖ್ವವನ್ನು ಕೈಗೊಳ್ಳುವುದು ಅವಶ್ಯಕ. ನೋಡಿ, ಇಂದು ದುರ್ಮಾರ್ಗದ ಕಡೆಗೆ ಕರೆದೊಯ್ಯಲು ಬಳಸಲಾಗದ ಯಾವ ಸಾಧನವಿಲ್ಲ ಎಂದು ನೀವೇ ಹೇಳಿರಿ! ಎಲ್ಲ ರೀತಿಯ ಮಾಧ್ಯಮಗಳು, ಎಲ್ಲ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಈ ಕಾಲದಲ್ಲಿ ಅವರು ಇದೇ ಕೆಲಸದಲ್ಲಿ ನಿರತರಾಗಿದ್ದಾರೆ. ಲೌಕಿಕ ಜನರು ದುರ್ಮಾರ್ಗ, ಅಸಡ್ಡೆ ಮತ್ತು ತಪ್ಪು ಮಾರ್ಗದ ಕಡೆಗೆ ಕರೆದೊಯ್ಯಲು ಮತ್ತು ಅಲ್ಲಾಹನಿಂದ ದೂರವಿರಿಸಲು ಎಲ್ಲ ಸಾಧನಗಳನ್ನು ಬಳಸಲು ಪ್ರಾರಂಭಿಸಿದ್ದಾರೆ. ನಾವು ಈ ಕಾಲದಲ್ಲಿ ಧರ್ಮದ ಪುನರುಜ್ಜೀವನ ಮತ್ತು ಇಸ್ಲಾಂನ ಪುನರುತ್ಥಾನಕ್ಕಾಗಿ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ನಂಬಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ಕೆಲಸವೆಂದರೆ ಈ ವಿಷಯಗಳಿಂದ ದೂರವಿರಲು ಪ್ರಯತ್ನಿಸುವುದು. ನಾವು ಈ ವಿಷಯಗಳಿಂದ ಎಷ್ಟು ದೂರವಿರುತ್ತೇವೆ ಎಂದು ನಾವೇ ಪರಿಶೀಲಿಸಿಕೊಳ್ಳಬೇಕು. ಯುವಕರು, ವೃದ್ಧರು, ಮಹಿಳೆಯರು, ಮಕ್ಕಳು, ಪ್ರತಿಯೊಬ್ಬರೂ ತಮ್ಮನ್ನು ತಾವು ಪರಿಶೀಲಿಸಿಕೊಳ್ಳಬೇಕು. ಅವರು ಹೇಳುತ್ತಾರೆ: ಲೋಕದ ಸ್ಥಿತಿ ಹೇಗಿದೆ ಎಂದರೆ, ಅಲ್ಲಾಹನ ಆಜ್ಞೆಗಳಿಗೆ ಬೆಲೆಕೊಡುವುದಿಲ್ಲ. ಹಕ್ಕುಗಳು ಮತ್ತು ಆಜ್ಞೆಗಳ ಬಗ್ಗೆ ಕಾಳಜಿ ಇಲ್ಲ. ಅಲ್ಲಾಹನು ಕೆಲವು ಉಪದೇಶಗಳನ್ನು ನೀಡಿದ್ದಾನೆ. ಅವುಗಳ ಬಗ್ಗೆ ಯಾವುದೇ ಕಾಳಜಿ ಇಲ್ಲ. ಲೋಕ ಮತ್ತು ಅದರ ಕಾರ್ಯಗಳಲ್ಲಿ ಮಿತಿಮೀರಿದ ಆಸಕ್ತಿ ಇದೆ. ನಾವು ನಮ್ಮನ್ನು ಪರಿಶೀಲಿಸಿದರೆ, ನಮ್ಮಲ್ಲಿಯೂ ಇದೇ ವಿಷಯಗಳಿವೆ, ಲೌಕಿಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ. ಕೆಲವೊಮ್ಮೆ ನಾವು ನಮಾಝ್ ಮಾಡುವುದನ್ನು ಮರೆತುಬಿಡುತ್ತೇವೆ, ಕೆಲವರು ಜುಮಾ ಬಗ್ಗೆ ಕಾಳಜಿ ವಹಿಸುವುದಿಲ್ಲ, ಕೆಲವರು ಇತರ ಒಳ್ಳೆಯ ಕಾರ್ಯಗಳ ಬಗ್ಗೆ ಕಾಳಜಿ ವಹಿಸುವುದಿಲ್ಲ, ನಮ್ಮ ಹಕ್ಕನ್ನು ಪಡೆಯಲು ಮತ್ತು ಇತರರ ಹಕ್ಕುಗಳನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತೇವೆ. ಇವು ಅಲ್ಲಾಹನ ಸಾಮೀಪ್ಯವನ್ನು ನೀಡಲು ಸಾಧ್ಯವಾಗದ ವಿಷಯಗಳಾಗಿವೆ. ಆದ್ದರಿಂದ, ಒಂದು ಕಡೆ ನಾವು ರಮಝಾನ್‌ನಲ್ಲಿ ಅಲ್ಲಾಹನು ನಮಗೆ ಒಳ್ಳೆಯ ಕಾರ್ಯಗಳನ್ನು ಮಾಡಲು ಅವಕಾಶ ನೀಡಲಿ, ನಮ್ಮ ಅಗತ್ಯಗಳನ್ನು ಪೂರೈಸಲಿ ಎಂದು ಪ್ರಾರ್ಥಿಸುತ್ತಿದ್ದೇವೆ, ಆದರೆ ಅಲ್ಲಾಹನು ನಮಗೆ ಹೇಳಿದ ವಿಷಯಗಳನ್ನು ನಾವು ಅನುಸರಿಸಬೇಕು. ಕೇವಲ ಪ್ರಾರ್ಥನೆಯಿಂದ ಕೆಲಸವಾಗುವುದಿಲ್ಲ, ಪ್ರಯತ್ನವನ್ನೂ ಮಾಡಬೇಕು. ಲೌಕಿಕ ವಿಷಯಗಳಲ್ಲಿ ತೊಡಗಿರುವ ಜನರು ಲೌಕಿಕ ವಿಷಯದಲ್ಲಿ ಏನಾದರೂ ನಷ್ಟ ಉಂಟಾದರೆ ಬಹಳ ಗದ್ದಲ ಮಾಡುತ್ತಾರೆ, ಬೊಬ್ಬೆ ಹಾಕುತ್ತಾರೆ, ಅಳಲು ಪ್ರಾರಂಭಿಸುತ್ತಾರೆ ಮತ್ತು ಲೌಕಿಕ ನಷ್ಟದಿಂದ ತಪ್ಪಿಸಿಕೊಳ್ಳಲು, ನಾನು ಮೊದಲೇ ಹೇಳಿದಂತೆ, ಅಲ್ಲಾಹನ ಹಕ್ಕನ್ನು ಬಿಡುತ್ತಾರೆ, ಲೌಕಿಕ ನಷ್ಟವಾಗಬಾರದು, ಅಲ್ಲಾಹನ ಹಕ್ಕು ಸಿಕ್ಕಿದೆಯೇ ಇಲ್ಲವೇ ಎಂಬುದು ಅವರಿಗೆ ಮುಖ್ಯವಲ್ಲ. ಅಲ್ಲಾಹನು ಹೇಳಿದ ವಿಷಯಗಳ ಬಗ್ಗೆ ಅವರು ಗಮನ ಹರಿಸುವುದಿಲ್ಲ. ಅವರು ಜನರ ಹಕ್ಕುಗಳನ್ನು ಪೂರೈಸುವುದಿಲ್ಲ. ಅವರು ವ್ಯಾಜ್ಯಗಳಲ್ಲಿ ಮೊಕದ್ದಮೆಗಳಲ್ಲಿ ತೊಡಗುತ್ತಾರೆ, ತಪ್ಪು ರೀತಿಯ ಕೇಸುಗಳಲ್ಲಿ, ಒಬ್ಬರನ್ನೊಬ್ಬರು ಕೆಳಗಿಳಿಸಲು ಪ್ರಯತ್ನಿಸುತ್ತಾರೆ, ಜನರು ತಪ್ಪು ವಾದಗಳನ್ನು ನೀಡುತ್ತಾರೆ, ವಕೀಲರ ಮಾತಿನಂತೆ ತಪ್ಪು ವಾದಗಳನ್ನು ಮಂಡಿಸುತ್ತಾರೆ. ವಕೀಲರು ಸುಳ್ಳು ವಾದಗಳನ್ನು ನೀಡಲು ಪ್ರಯತ್ನಿಸುತ್ತಾರೆ. ಸುಳ್ಳು ಸಾಕ್ಷ್ಯಗಳನ್ನು ನೀಡುತ್ತಾರೆ, ಅಂತಹ ಪರಿಸ್ಥಿತಿಯಲ್ಲಿ ಅಲ್ಲಾಹನು ನಮ್ಮೊಂದಿಗೆ ಹೇಗೆ ಇರಲು ಸಾಧ್ಯ? ಅಲ್ಲಾಹನ ಬೆಂಬಲವನ್ನು ಪಡೆಯಲು, ನಾವು ಒಳ್ಳೆಯ ಕಾರ್ಯಗಳತ್ತ ಗಮನ ಹರಿಸಬೇಕು ಮತ್ತು ಅಲ್ಲಾಹನ ಆಜ್ಞೆಗಳನ್ನು ಅನುಸರಿಸಲು ಪ್ರಯತ್ನಿಸಬೇಕು. ನಾವು ದುರ್ಬಲರಾಗಿರುವಾಗ ಪಾಪ ಮಾಡಲು ಧೈರ್ಯವಿರುವುದಿಲ್ಲ, ಪಾಪ ಮಾಡುವುದಿಲ್ಲ, ನಾವು ದುರ್ಬಲರಾಗಿರುವಾಗ ಅಲ್ಲಾಹನ ಕಡೆಗೆ ತಿರುಗುತ್ತೇವೆ ಮತ್ತು ಅವಕಾಶ ಸಿಗುವಾಗ ತಕ್ಷಣ ಸುಳ್ಳು ಮತ್ತು ಪಾಪಗಳನ್ನು ಮಾಡಲು ಪ್ರಾರಂಭಿಸುತ್ತೇವೆ, ಸೌಲಭ್ಯಗಳು ಮತ್ತು ವಿಶಾಲತೆ ಬರುವಾಗ, ಅಲ್ಲಾಹನು ನಮಗೆ ಸೌಲಭ್ಯಗಳು ಮತ್ತು ವಿಶಾಲತೆಯನ್ನು ನೀಡಿದ್ದಾನೆ ಮತ್ತು ಮೊದಲು ನಮ್ಮ ಸ್ಥಿತಿ ಹೇಗಿತ್ತು ಎಂಬುದನ್ನು ಮರೆತುಬಿಡುತ್ತೇವೆ. ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದು ಎಂದರೆ ನಾವು ಈ ಸತ್ಕಾರ್ಯಗಳನ್ನು ಮುಂದುವರಿಸಬೇಕು ಹಾಗೂ ಅಲ್ಲಾಹನ ಮತ್ತು ಅವನ ದಾಸರ ಹಕ್ಕುಗಳನ್ನು ಕಸಿದುಕೊಳ್ಳಲು ಎಂದಿಗೂ ಪ್ರಯತ್ನಿಸಬಾರದು. ನಾವು ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದರೆ, ಅದಕ್ಕೆ ಕಾರಣ ನಿಜವಾದ ತಖ್ವ ಇಲ್ಲದಿರುವುದಾಗಿದೆ. ನಿಜವಾದ ತಖ್ವ ಇದ್ದರೆ, ಮನುಷ್ಯನು ಅಂತಹ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಹೃದಯಗಳಲ್ಲಿ ಸತ್ಯವಿಶ್ವಾಸವಿಲ್ಲ ಮತ್ತು ಸತ್ಕರ್ಮವಿಲ್ಲ. ಕೆಲವರು ಹದೀಸ್ ಮತ್ತು ಖುರ್‌ಆನ್ ಬಗ್ಗೆ ಮಾತನಾಡುತ್ತಾರೆ, ಆದರೆ ಅವರ ಕರ್ಮದ ಸ್ಥಿತಿ ಮತ್ತು ಸತ್ಯವಿಶ್ವಾಸ ಆ ವಿಷಯಗಳನ್ನು ಅನುಸರಿಸುವಷ್ಟು ಇರುವುದಿಲ್ಲ. ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ

ವಿಷಯಗಳನ್ನು ಪುನಃಸ್ಥಾಪಿಸಲು ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ. ಮೈದಾನ ಖಾಲಿಯಾಗಿರುವುದನ್ನು ಅಲ್ಲಾಹನು ನೋಡಿದಾಗ, ಈ ಮೈದಾನ ಖಾಲಿಯಾಗಿರಲು ಮತ್ತು ಜನರು ದೂರವಿರಲು ಅವನು ಇಷ್ಟಪಡಲಿಲ್ಲ. ಆದ್ದರಿಂದ ಈಗ ಅಲ್ಲಾಹನು ಅದಕ್ಕೆ ಎದುರಾಗಿ ಜೀವಂತ ಜನರ ಹೊಸ ಜನಾಂಗವನ್ನು ಸೃಷ್ಟಿಸಲು ಬಯಸುತ್ತಾನೆ, ಆದ್ದರಿಂದ ನಮ್ಮ ತಬ್ಲೀಗ್ ಎಂದರೆ, ಪ್ರಚಾರವೆಂದರೆ ತಖ್ವದ ಜೀವನವನ್ನು ಪಡೆಯುವುದು. ಆದ್ದರಿಂದ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ಗೆ ಬಂದ ಹೊಸ ಜನಾಂಗವಾಗಿರುವುದರಿಂದ ನಾವು ತಖ್ವದ ಜೀವನದಲ್ಲಿ ನಡೆಯಬೇಕು ಮತ್ತು ನಡೆಯಲು ಪ್ರಯತ್ನಿಸಬೇಕು."

"ತಖ್ವ ಎನ್ನುವುದು ಬಾಯಿಯಿಂದ ಮಾತ್ರ ಮನುಷ್ಯನಿಗೆ ಸಿಗುವ ವಸ್ತುವಲ್ಲ. ಶೈತಾನನು ದಾರಿ ತಪ್ಪಿಸುತ್ತಾನೆ, ತಖ್ವವನ್ನು ಕೈಗೊಳ್ಳುವವರನ್ನೂ ದಾರಿ ತಪ್ಪಿಸುತ್ತಾನೆ. ಇದಕ್ಕೆ ಒಂದು ಉದಾಹರಣೆಯಿದೆ, ನೀವು ಒಂದು ಸ್ವಲ್ಪ ಸಿಹಿಯನ್ನು ಇಟ್ಟರೆ, ಅದರ ಮೇಲೆ ಅಸಂಖ್ಯಾತ ಇರುವೆಗಳು ಬರುತ್ತವೆ. ಎಲ್ಲಿಯಾದರೂ ಸಿಹಿ ಇಟ್ಟರೆ, ಸಕ್ಕರೆ ಇಟ್ಟರೆ, ಸಿಹಿ ತಿನಿಸು ಇಟ್ಟರೆ, ಅದರ ಮೇಲೆ ಇರುವೆಗಳು ಬರುತ್ತವೆ, ಶೈತಾನನ ಪಾಪಗಳ ಸ್ಥಿತಿಯೂ ಇದೇ ಆಗಿದೆ. ಇದರಿಂದ ಮನುಷ್ಯನ ದೌರ್ಬಲ್ಯದ ಸ್ಥಿತಿಯು ತಿಳಿದುಬರುತ್ತದೆ. ನಾನು ಬಹಳ ಒಳ್ಳೆಯವನಾಗಿದ್ದೇನೆ, ನಾನು ಬಹಳ ತಖ್ವದ ಪ್ರಕಾರ ನಡೆಯುತ್ತಿದ್ದೇನೆ ಎಂದು ಅವನು ಭಾವಿಸುತ್ತಾನೆ, ಆದರೆ ಶೈತಾನನು ದಾಳಿ ಮಾಡುವಾಗ, ಶೈತಾನನ ದಾಳಿಯಿಂದ ನೀವು ಇನ್ನೂ ಸಂಪೂರ್ಣವಾಗಿ ಅಲ್ಲಾಹನ ರಕ್ಷಣೆಗೆ ಬಂದಿಲ್ಲ ಎಂದು ತಿಳಿಯುತ್ತದೆ. ಅಲ್ಲಾಹನು ಇಚ್ಛಿಸಿದ್ದರೆ, ಮನುಷ್ಯನಲ್ಲಿ ಅಂತಹ ದೌರ್ಬಲ್ಯವನ್ನು ಇಡುತ್ತಿರಲಿಲ್ಲ. ನಾನು ಹೇಳಿದಂತೆ, ಅಲ್ಪ ಸ್ವಲ್ಪ ಸತ್ಕರ್ಮಗಳನ್ನು ಮಾಡಿದರೆ, ನಾನು ತಖ್ವದ ಪ್ರಕಾರ ನಡೆಯುವವನಾಗಿದ್ದೇನೆ ಎಂದು ಅವನು ಭಾವಿಸುತ್ತಾನೆ. ಆದರೆ ಇದು ನಿಜವಾದ ತಖ್ವ ಅಲ್ಲ. ಇದು ಶೈತಾನನು ದಾಳಿ ಮಾಡುವಂತಹ ತಖ್ವ. ಸಿಹಿ ತಿನಿಸಿನ ಮೇಲೆ ಇರುವೆಗಳು ಬರುವ ಉದಾಹರಣೆಯನ್ನು ನೀಡಿದಂತೆಯೇ, ಶೈತಾನನು ಕೂಡ ಮನುಷ್ಯನನ್ನು ಪ್ರಚೋದಿಸಲು ದಾಳಿ ಮಾಡುತ್ತಾನೆ. ನೀನು ಬಹಳ ಒಳ್ಳೆಯವನಾಗಿದ್ದೀಯೆ ಎಂದು ಅವನ ಮೆದುಳಿನಲ್ಲಿ ಹಾಕಲು ಶೈತಾನನು ಪ್ರಯತ್ನಿಸುತ್ತಾನೆ. ಮನುಷ್ಯನ ಸ್ಥಿತಿ ಹೀಗಾದಾಗ, ಅವನು ಒಳ್ಳೆಯ ಕಾರ್ಯಗಳಿಂದ ದೂರ ಸರಿಯುತ್ತಾನೆ, ಅಹಂಕಾರ ಉಂಟಾಗುತ್ತದೆ. ಆದ್ದರಿಂದ, ತಖ್ವದ ಮಾರ್ಗದಲ್ಲಿ ನಡೆಯುವವರು ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ ಮತ್ತು ಪ್ರತಿ ಶಕ್ತಿಯ ಮೂಲವು ಅಲ್ಲಾಹನಲ್ಲದೆ ಬೇರೆ ಯಾರೂ ಅಲ್ಲ ಎಂದು ಮನುಷ್ಯನಿಗೆ ಗೊತ್ತಾಗುವಾಗ ಮಾತ್ರ ಇದು ಸಾಧ್ಯ. ಯಾವುದೇ ಪ್ರವಾದಿ ಅಥವಾ ಸಂದೇಶವಾಹಕರಿಗೆ ಸ್ವತಃ ತನ್ನಿಂದ ಶಕ್ತಿಯನ್ನು ನೀಡಲು ಸಾಧ್ಯವಿಲ್ಲ. ಹೌದು, ಪ್ರವಾದಿಗಳು ಮತ್ತು ರಸೂಲರಿಂದ ಅನುಗ್ರಹಗಳು ಸಿಗುತ್ತವೆ, ಅವರ ಬೋಧನೆಗಳ ಪ್ರಕಾರ ನಡೆದರೆ ಅನುಗ್ರಹಗಳು ಸಿಗುತ್ತವೆ, ಆದರೆ ಶಕ್ತಿಯು ಅಲ್ಲಾಹನ ಬಳಿ ಮಾತ್ರ ಇದೆ ಮತ್ತು ಪ್ರವಾದಿಗಳು ಮತ್ತು ರಸೂಲರು ಸಹ ಅಲ್ಲಾಹನಿಂದ ಯಾಚಿಸಲು ಹೇಳುತ್ತಾರೆ ಮತ್ತು ಈ ಶಕ್ತಿಯು ಅಲ್ಲಾಹನಿಂದ ಮನುಷ್ಯನಿಗೆ ಸಿಗುವಾಗ, ಅವನಲ್ಲಿ ಬದಲಾವಣೆ ಉಂಟಾಗುತ್ತದೆ. ಅದನ್ನು ಪಡೆಯಲು ಪ್ರಾರ್ಥನೆಯನ್ನು ಬಳಸುವುದು ಅವಶ್ಯಕ ಮತ್ತು ನಮಾಝ್ ಒಂದು ಒಳ್ಳೆಯ ಕಾರ್ಯವಾಗಿದ್ದು, ಇದರಿಂದ ಶೈತಾನನ ದೌರ್ಬಲ್ಯವು ದೂರವಾಗುತ್ತದೆ ಮತ್ತು ಅದನ್ನೇ ನಮಾಝ್ ಎಂದು ಕರೆಯಲಾಗುತ್ತದೆ. ಮನುಷ್ಯನು ಇದರಲ್ಲಿ ದುರ್ಬಲನಾಗಿರಬೇಕು ಎಂದು ಶೈತಾನನು ಬಯಸುತ್ತಾನೆ, ಏಕೆಂದರೆ ತನ್ನನ್ನು ತಾನು ಸುಧಾರಿಸಿಕೊಳ್ಳುವ ಮಾರ್ಗವು ಇದೊಂದೇ ಎಂದು ಶೈತಾನನಿಗೆ ಗೊತ್ತಿದೆ. ಆದ್ದರಿಂದ, ಪರಿಶುದ್ಧನಾಗಿರುವುದು ಇದಕ್ಕೆ ಇರುವ ಷರತ್ತು. ಮನುಷ್ಯನಲ್ಲಿ ಕೊಳಕು ಇರುವವರೆಗೂ ಶೈತಾನನು ಅವನನ್ನು ಪ್ರೀತಿಸುತ್ತಾನೆ.

(ಮಲ್‌ಫೂಝಾತ್, ಸಂಪುಟ-4, ಪುಟ-398, 1984)

ಆದ್ದರಿಂದ, ಪರಿಶುದ್ಧನಾಗಲು ನಮಾಝ್ ಷರತ್ತು ಮತ್ತು ಈ ರಮಝಾನ್‌ನಲ್ಲಿ ನಾವು ನಿಯಮಿತವಾಗಿ ನಮಾಝ್ ನಿರ್ವಹಿಸುವ ಮತ್ತು ಅದರ ಬಗ್ಗೆ ಗಮನ ಹರಿಸುವ ಲಾಭವನ್ನು ಪಡೆದಿದ್ದೇವೆ, ನಫ್ಲ್‌ಗಳ ಬಗ್ಗೆ ಗಮನ ಹರಿಸಿದ್ದೇವೆ. ಶೈತಾನನಿಂದ ಸ್ಥಾಯಿಯಾಗಿ ತಪ್ಪಿಸಿಕೊಳ್ಳಲು ಮತ್ತು ತಖ್ವದ ಮಾರ್ಗದಲ್ಲಿ ನಡೆಯಲು, ಆರಾಧನೆಯ ಬಗ್ಗೆ ಗಮನ ಹರಿಸುವುದು ಷರತ್ತು. ಅಲ್ಲಾಹನ ಆಜ್ಞೆಗಳ ಪ್ರಕಾರ ಮಾಡುವ ಆರಾಧನೆ ಮಾಡುವಾಗ, ಅದನ್ನು ನಿಧಾನವಾಗಿ ಮಾಡುವಾಗ ಅದರಲ್ಲಿ ಯಾವುದೇ ರೀತಿಯ ತೋರಿಕೆ ಇರದೇ ಇರುವಾಗ, ಅಂತಹ ಆರಾಧನೆಗಳನ್ನು ಮಾಡುವ ಮನುಷ್ಯನು ಶೈತಾನನ ದಾಳಿಯಿಂದ ಯಾವಾಗಲೂ ತಪ್ಪಿಸಿಕೊಳ್ಳುತ್ತಾನೆ ಮತ್ತು ಅಲ್ಲಾಹನ ರಕ್ಷಣೆಯಲ್ಲಿರುತ್ತಾನೆ.

ತಖ್ವದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

ತಖ್ವವುಳ್ಳವನಾಗಲು, ವ್ಯಭಿಚಾರ, ಕಳ್ಳತನ, ಹಕ್ಕುಗಳ ಉಲ್ಲಂಘನೆ, ತೋರಿಕೆ, ಅಹಂಕಾರ, ತಿರಸ್ಕಾರ, ಜಿಪುಣತನ ಮುಂತಾದ ದೊಡ್ಡ ವಿಷಯಗಳನ್ನು ತ್ಯಜಿಸಿದ ನಂತರ, ಕೆಟ್ಟ ಸ್ವಭಾವಗಳಿಂದ ದೂರವಿರಬೇಕು ಮತ್ತು ಅವುಗಳಿಗೆ ಬದಲಾಗಿ ಉತ್ತಮ ಸ್ವಭಾವಗಳನ್ನು ಬೆಳೆಸಬೇಕು. ದೊಡ್ಡ ದೊಡ್ಡ ಕೆಟ್ಟತನಗಳಿಂದ ದೂರವಿರುವುದು ಮತ್ತು ಕೆಟ್ಟ ಸ್ವಭಾವಗಳಿಂದ ದೂರವಿರುವುದು, ಕೆಟ್ಟ ವಿಷಯಗಳಿಂದ ದೂರವಿರುವುದು ತಖ್ವಕ್ಕೆ ಅವಶ್ಯಕ. ಆದರೆ ಇದು ಮಾತ್ರ ಸಾಕಾಗುವುದಿಲ್ಲ, ಇದಕ್ಕೆ ವಿರುದ್ಧವಾಗಿ ಒಳ್ಳೆಯ ಸ್ವಭಾವಗಳು ಉಂಟಾದರೆ ಮಾತ್ರ ನಿಜವಾದ ತಖ್ವ. ಕೆಟ್ಟತನಗಳನ್ನು ದೂರ ಮಾಡಿ ಒಳ್ಳೆಯ ಕಾರ್ಯಗಳನ್ನು ಮಾಡುವುದು ಮುಖ್ಯ ವಿಷಯ. ಕೆಟ್ಟ ಸ್ವಭಾವವನ್ನು ಕೊನೆಗೊಳಿಸುವುದು ಮತ್ತು ಒಳ್ಳೆಯ ಸ್ವಭಾವವನ್ನು ಅಳವಡಿಸಿಕೊಳ್ಳುವುದು ಮುಖ್ಯ ವಿಷಯ. ಕೆಟ್ಟತನದಿಂದ ದೂರವಿರುವುದು ಮಾತ್ರ ತಖ್ವ ಅಲ್ಲ, ಬದಲಿಗೆ ಕೆಟ್ಟತನದಿಂದ ದೂರವಿದ್ದು ಒಳ್ಳೆಯ ಕಾರ್ಯಗಳನ್ನು ಮಾಡುವುದು ತಖ್ವ.

ಇದರ ಜೊತೆಗೆ ಸತ್ಕರ್ಮಗಳಲ್ಲಿ ಇನ್ನೇನು ವಿಷಯಗಳಿವೆ? ಜನರೊಂದಿಗೆ ಸಭ್ಯವಾಗಿ ವರ್ತಿಸುವುದು, ಒಳ್ಳೆಯ ನಡತೆ ತೋರಿಸುವುದು, ಸಹಾನುಭೂತಿ ತೋರುವುದು, ಅಲ್ಲಾಹನೊಂದಿಗೆ ನಿಜವಾದ ನಿಷ್ಠೆ ಮತ್ತು ಪ್ರಾಮಾಣಿಕತೆ ತೋರಿಸುವುದು. ಅಲ್ಲಾಹನಿಗೆ ಇಷ್ಟವಾಗುವ ಮತ್ತು ಪ್ರಶಂಸನೀಯವಾದ ಕಾರ್ಯಗಳನ್ನು ಮಾಡಲು ಸೌಭಾಗ್ಯ ಲಭಿಸುವ ರೀತಿಯಲ್ಲಿ ಪ್ರಯತ್ನಿಸುವುದು. ಈ ವಿಷಯಗಳಿಂದ ಮನುಷ್ಯನು ತಖ್ವವುಳ್ಳವನಾಗುತ್ತಾನೆ. ಈ ವಿಷಯಗಳು ಮನುಷ್ಯನಲ್ಲಿ ಉಂಟಾಗುವಾಗ, ಮನುಷ್ಯನು ತಖ್ವವುಳ್ಳವನಾಗುತ್ತಾನೆ. ಅಂತಹ ಜನರು ಇದ್ದರೆ ಅಲ್ಲಾಹನು ಅಂತಹ ಜನರ ರಕ್ಷಕನಾಗುತ್ತಾನೆ, ಏಕೆಂದರೆ ಅಲ್ಲಾಹನು ಸ್ವತಃ ಹೇಳುತ್ತಾನೆ, **'ಲಾ ಖೌಫುನ್ ಅಲೈಹಿಮ್ ವಲಾ ಹುಮ್ ಯಹ್ಝನೂನ್'**. ಅವರಿಗೆ ಯಾವುದೇ ಭಯವಿರುವುದಿಲ್ಲ ಮತ್ತು ಅವರು ದುಃಖಿಸುವುದಿಲ್ಲ. ಮತ್ತು ಇನ್ನೊಂದು ಕಡೆ **'ವಹುವ ಯತವಲ್ಲ ಅಸ್ಸಾಲಿಹೀನ್'** ಎಂದು ಹೇಳುತ್ತಾನೆ. ಮತ್ತು ಅವನು ಸಜ್ಜನರ ರಕ್ಷಕನಾಗುತ್ತಾನೆ. ಅಲ್ಲಾಹನು ಅವರ ಕೈಯಾಗುತ್ತಾನೆ, ಅದರಿಂದ ಅವರು ಹಿಡಿಯುತ್ತಾರೆ, ಅವರು ನೋಡುವ ಕಣ್ಣಾಗುತ್ತಾನೆ, ಅವರು ಕೇಳುವ ಕಿವಿಯಾಗುತ್ತಾನೆ, ಅವರು ನಡೆಯುವ ಪಾದಗಳಾಗುತ್ತಾನೆ ಎಂದು ಹದೀಸ್‌ನಲ್ಲಿ ಹೇಳಲಾಗಿದೆ. ನನ್ನ ಸ್ನೇಹಿತನನ್ನು ವಿರೋಧಿಸುವವನ ವಿರುದ್ಧ ನಾನು ಹೋರಾಡಲು ಹೇಳುತ್ತೇನೆ ಎಂದು ಒಂದು ಹದೀಸ್‌ನಲ್ಲಿ ಹೇಳಲಾಗಿದೆ. ಇನ್ನೊಂದು ಕಡೆ, ಯಾರಾದರೂ ದೇವನ ಸ್ನೇಹಿತನ ಮೇಲೆ ದಾಳಿ ಮಾಡಿದರೆ, ಸಿಂಹಿಣಿಯಿಂದ ಮಗುವನ್ನು ಕಿತ್ತುಕೊಳ್ಳುವಾಗ ಸಿಂಹಿಣಿಯು ಕೋಪದಿಂದ ಹೇಗೆ ದಾಳಿ ಮಾಡುತ್ತದೆಯೋ ಹಾಗೆಯೇ ಅಲ್ಲಾಹನು ಆ ಶತ್ರುವಿನ ಮೇಲೆ ದಾಳಿ ಮಾಡುತ್ತಾನೆ. ಮನುಷ್ಯನು ಅಲ್ಲಾಹನ ಕಡೆಗೆ ಹೆಜ್ಜೆ ಹಾಕುವಾಗ ಅಲ್ಲಾಹನ ಕೃಪೆಯು ಸಿಗುತ್ತದೆ. ಅಲ್ಲಾಹನ ಕೃಪೆಯು ಎಲ್ಲರಿಗೂ ಸಿಗುವುದಿಲ್ಲ, ಆದ್ದರಿಂದ ಯಾರಿಗೆ ಸಿಗುತ್ತದೆಯೋ ಅವರು ಅದಕ್ಕೆ ದೃಷ್ಟಾಂತಗಳಾಗುತ್ತಾರೆ. ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೆ ಅತ್ಯಂತ ಹೆಚ್ಚು ದೃಷ್ಟಾಂತಗಳನ್ನು ತೋರಿಸಲಾಯಿತು. ಶತ್ರುಗಳು ಹಝ್ರತ್ ಪೈಗಂಬರ್(ಸ)ರನ್ನು ವಿಫಲಗೊಳಿಸಲು ಏನೆಲ್ಲಾ ಪ್ರಯತ್ನಗಳನ್ನು ಮಾಡಿದ್ದರು. ಆದರೆ ಒಂದು ಕೂಡ ಯಶಸ್ವಿಯಾಗಲಿಲ್ಲ, ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕೊಲ್ಲಲು ಯೋಜನೆಗಳನ್ನು ಮಾಡಿದರು, ಆದರೆ ಅಂತಿಮವಾಗಿ ವಿಫಲರಾದರು. ನಿಮ್ಮ ಹೃದಯದಲ್ಲಿ ಅಲ್ಲಾಹನ ಪ್ರೀತಿ ಮತ್ತು ಮಹಿಮೆಯ ಸರಪಣಿಯನ್ನು ಮುಂದುವರಿಸಿ ಮತ್ತು ಅದಕ್ಕಾಗಿ ನಮಾಝ್‌ಗಿಂತ ದೊಡ್ಡದಾದ ಸಂಗತಿಯಿಲ್ಲ. ಅಲ್ಲಾಹನ ಮುಂದೆ ನಿಮ್ಮ ಒಳಿತುಗಳನ್ನು ಪ್ರಸ್ತುತಪಡಿಸುವುದು ಮತ್ತು ಅವನ ಆರಾಧನೆಯ ಹಕ್ಕನ್ನು ಪೂರೈಸುವುದು ಮುಖ್ಯ ವಿಷಯವಾಗಿದೆ ಮತ್ತು ಅದಕ್ಕಾಗಿ ನಮಾಝ್ ಅತ್ಯುನ್ನತ ಸಂಗತಿ. ಆದ್ದರಿಂದ, ನಾವು ರಮಝಾನ್‌ನಿಂದ ಹಾದುಹೋಗಿದ್ದೇವೆ, ನಮಾಝ್‌ಗಳ ಸ್ಥಿತಿಯಿಂದ ಹಾದುಹೋಗಿದ್ದೇವೆ, ಒಳ್ಳೆಯ ಕಾರ್ಯಗಳ ಸ್ಥಿತಿಯಿಂದ ಹಾದುಹೋಗಿದ್ದೇವೆ, ಈಗ ಅವುಗಳನ್ನು ಮುಂದುವರಿಸುವುದು ಅಲ್ಲಾಹನ ಕರುಣೆಯನ್ನು ಸೆಳೆಯಲು ಮತ್ತು ಅವುಗಳನ್ನು ನಮ್ಮ ಜೀವನದ ಶಾಶ್ವತವಾದ ಸ್ಥಾಯಿಯಾದ ಭಾಗವಾಗಿಸುವುದು ಅವಶ್ಯಕವಾಗಿದೆ. ಇದರ ಹೊರತಾಗಿ ಬೇರೆ ಮಾರ್ಗವಿಲ್ಲ. ಉಪವಾಸಗಳು ವರ್ಷಕ್ಕೊಮ್ಮೆ ಬರುತ್ತವೆ, ಹಣವಿದ್ದವರು ಮಾತ್ರ ಝಕಾತ್ ನೀಡಬೇಕಾಗುತ್ತದೆ, ಝಕಾತ್ ನೀಡಲು ಹಣವಿರುವವರಿಗೆ ಅದು ಕಡ್ಡಾಯವಾಗಿದೆ, ಪ್ರತಿಯೊಬ್ಬರೂ ಝಕಾತ್ ನೀಡಬೇಕಾಗಿಲ್ಲ. ಅದು ಸಹ ಒಂದು ಒಳ್ಳೆಯ ಕಾರ್ಯ, ಆದರೆ ನಮಾಝ್ ಪ್ರತಿಯೊಬ್ಬರೂ ಐದು ಹೊತ್ತು ನಿರ್ವಹಿಸಬೇಕಾದ ಸಂಗತಿಯಾಗಿದೆ, ಬಡವರಾಗಲಿ, ಶ್ರೀಮಂತರಾಗಲಿ, ದೊಡ್ಡವರಾಗಲಿ, ಚಿಕ್ಕವರಾಗಲಿ, ಪ್ರತಿಯೊಬ್ಬರೂ ನಮಾಝ್ ನಿರ್ವಹಿಸಬೇಕು, ಅದನ್ನು ಎಂದಿಗೂ ಬಿಡಬೇಡಿರಿ, ಅದನ್ನು ಪದೇ ಪದೇ ಅನುಷ್ಠಿಸಬೇಕು. ನಾನು ಎಂತಹ ಶಕ್ತಿಶಾಲಿ ದೇವನ ಮುಂದೆ

ನಿಂತಿದ್ದೇನೆ ಎಂದರೆ ಅವನು ಈಗಲೇ ನನ್ನ ದುಆಗಳನ್ನು ಸ್ವೀಕರಿಸಲು ಇಚ್ಛಿಸಿದರೆ ಸ್ವೀಕರಿಸಲು ಸಾಧ್ಯವಿದೆ ಎಂಬ ಆಲೋಚನೆಯಿಂದ ನಮಾಝ್ ಅನುಷ್ಠಿಸಬೇಕು. ಅಂತಹ ದೃಢವಾದ ನಂಬಿಕೆ ಇರಬೇಕು, ನಾನು ಎಂತಹ ಶಕ್ತಿಶಾಲಿ ಅಲ್ಲಾಹನ ಮುಂದೆ ನಿಂತಿದ್ದೇನೆ ಎಂದರೆ ಅವನು ಇಚ್ಛಿಸಿದರೆ ನನ್ನ ಪ್ರಾರ್ಥನೆಯನ್ನು ಈಗಲೇ ಸ್ವೀಕರಿಸಬಹುದು ಎಂಬ ದೃಢವಿಶ್ವಾಸ ಇರಬೇಕು. ಲೌಕಿಕ ಆಡಳಿತಗಾರರು ಖಜಾನೆಗಳ ಮೇಲೆ ಅವಲಂಬಿತರಾಗಿರುತ್ತಾರೆ. ಖಜಾನೆ ಖಾಲಿಯಾಗಬಾರದು ಎಂಬ ಚಿಂತೆ ಅವರಿಗಿರುತ್ತದೆ, ಬಡತನದ ಚಿಂತೆ ಅವರಿಗೆ ಇರುತ್ತದೆ. ಖಜಾನೆಗಳು ಬರುತ್ತವೆ ಮತ್ತು ತುಂಬುತ್ತವೆ, ಆದರೆ ನಾವು ಅವುಗಳನ್ನು ಬಹಳ ಹೆಚ್ಚಾಗಿ ಖರ್ಚು ಮಾಡುತ್ತಿದ್ದರೆ, ನಮ್ಮ ಖಜಾನೆಗಳು ಖಾಲಿಯಾಗಬಹುದು ಎಂಬ ಚಿಂತೆ ಅವರಿಗಿರುತ್ತದೆ. ಇಂದು ಪಾಶ್ಚಿಮಾತ್ಯ ಲೋಕದಲ್ಲಿ ತಮ್ಮನ್ನು ಸ್ವತಃ ಬಹಳ ಶ್ರೀಮಂತರೆಂದು ಪರಿಗಣಿಸುವ ಜನರ ಸ್ಥಿತಿಯೂ ಇದೇ ಆಗಿದೆ. ನಮ್ಮ ಬಳಿ ಸಾಕಷ್ಟು ಸಂಪತ್ತು ಇದೆ, ಅದು ಎಂದಿಗೂ ಮುಗಿಯುವುದಿಲ್ಲ ಎಂದು ಅವರು ಭಾವಿಸಿದ್ದರು, ಆದರೆ ಈಗ ಬಹಳ ಕೆಟ್ಟ ಪರಿಸ್ಥಿತಿಗಳು ಉಂಟಾಗುತ್ತಿವೆ, ಪ್ರತಿಯೊಬ್ಬರ ಆರ್ಥಿಕತೆಯು ವಿನಾಶದ ಕಡೆಗೆ ಹೋಗುತ್ತಿದೆ, ಹಣದುಬ್ಬರ ಹೆಚ್ಚುತ್ತಿದೆ, ರೂಪಾಯಿ ಮೌಲ್ಯ ಕಡಿಮೆಯಾಗುತ್ತಿದೆ, ಪೌಂಡ್ ಮೌಲ್ಯ ಕಡಿಮೆಯಾಗುತ್ತಿದೆ, ಡಾಲರ್ ಮೌಲ್ಯ ಕಡಿಮೆಯಾಗುತ್ತಿದೆ ಮತ್ತು ಗೊಂದಲ ಉಂಟಾಗಿದೆ ಮತ್ತು ಅವರಿಗೆ ಚಿಂತೆ ಉಂಟಾಗಿದೆ, ಅದಕ್ಕಾಗಿಯೇ ಅವರು ಅನೇಕ ನಿರ್ಬಂಧಗಳನ್ನು ವಿಧಿಸಿದ್ದಾರೆ, ಆದರೆ ಅಲ್ಲಾಹನ ಖಜಾನೆ ಯಾವಾಗಲೂ ತುಂಬಿರುತ್ತದೆ. ಮನುಷ್ಯನು ಅವನ ಮುಂದೆ ನಿಂತಾಗ, ನಂಬಿಕೆ ಮಾತ್ರ ಬೇಕಾಗುತ್ತದೆ. ಅಲ್ಲಾಹನಲ್ಲಿ ಎಲ್ಲಾ ಶಕ್ತಿಗಳಿವೆ ಮತ್ತು ಅವನ ಖಜಾನೆಗಳು ಯಾವಾಗಲೂ ತುಂಬಿರುತ್ತದೆ ಎಂಬ ನಂಬಿಕೆ ಇರಬೇಕು, ಈ ನಂಬಿಕೆ ಇದ್ದಾಗ ಮಾತ್ರ ಅಲ್ಲಾಹನು ಮನುಷ್ಯನ ದುಆಗಳನ್ನು ಆಲಿಸುತ್ತಾನೆ.

ಅಲ್ಲಾಹನಲ್ಲಿ ಶಕ್ತಿಗಳಿವೆ, ಅವನು ಪ್ರಾರ್ಥನೆಗಳನ್ನು ಸ್ವೀಕರಿಸಿ ತಕ್ಷಣ ನೀಡುತ್ತಾನೆ. ನಾನು ಸರ್ವಜ್ಞ, ಜ್ಞಾನವುಳ್ಳವನು ಮತ್ತು ಶಕ್ತಿಶಾಲಿಯಾದ ದೇವನ ಮುಂದೆ ನಿಂತಿದ್ದೇನೆ ಎಂದು ಮನುಷ್ಯನಿಗೆ ಖಚಿತತೆ ಇರಬೇಕು, ದೃಢವಿಶ್ವಾಸವಿರಬೇಕು.

ಅವನೊಡನೆ ಪ್ರಾರ್ಥಿಸಿ, ಹತಾಶೆ ಮತ್ತು ಅವಿಶ್ವಾಸ ಎಂದಿಗೂ ಇರಬಾರದು. ಹಾಗಾದರೆ ಅವನು ಬೇಗನೇ ಆರಾಮವನ್ನು ಪಡೆಯುವನು. ಮನುಷ್ಯನು ಅಂತಹ ಸ್ಥಿತಿಯನ್ನು ತನ್ನೊಳಗೆ ಉಂಟುಮಾಡಿದರೆ, ಅಲ್ಲಾಹನ ಕೃಪೆಗಳು ಲಭಿಸುತ್ತವೆ ಮತ್ತು ಅವನು ಸ್ವತಃ ಅಲ್ಲಾಹನನ್ನು ಭೇಟಿಯಾಗುತ್ತಾನೆ. ಆದರೆ ದುಷ್ಟ ಮತ್ತು ಪಾಪಿಗಳ ಪ್ರಾರ್ಥನೆಯನ್ನು ಸ್ವೀಕರಿಸಲಾಗುವುದಿಲ್ಲ, ಏಕೆಂದರೆ ಅವರು ಅಲ್ಲಾಹನ ಬಗ್ಗೆ ಅಸಡ್ಡೆ ತೋರಿಸುತ್ತಾರೆ. ಮಗನು ತಂದೆಯ ಬಗ್ಗೆ ಕಾಳಜಿ ವಹಿಸದಿದ್ದರೆ ಮತ್ತು ದುಷ್ಟನಾಗಿದ್ದರೆ, ತಂದೆ ಅವನ ಬಗ್ಗೆ ಏಕೆ ಕಾಳಜಿ ವಹಿಸಬೇಕು, ಅದೇ ರೀತಿಯಲ್ಲಿ ಅಲ್ಲಾಹನು ಏಕೆ ಕಾಳಜಿ ವಹಿಸಬೇಕು? (ಮಲ್‌ಫೂಝಾತ್, ಸಂಪುಟ–4, ಪುಟ–400–402, 1984)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತ್ ಅಲ್ಲಾಹನೊಂದಿಗೆ ನಿಜವಾದ ಸಂಬಂಧವನ್ನು ಬೆಳೆಸಬೇಕು ಮತ್ತು ನಮ್ಮ ನಂಬಿಕೆಯ ಶಕ್ತಿಯನ್ನು ದೃಢನಂಬಿಕೆಯ ಮಟ್ಟಕ್ಕೆ ತಲುಪಿಸಲು ಪ್ರಯತ್ನಿಸಬೇಕು. ಇದೇ ಉದ್ದೇಶಕ್ಕಾಗಿ ನಾನು ಬಂದಿದ್ದೇನೆ ಮತ್ತು ಈ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸದಿದ್ದರೆ, ನನ್ನ ಬೈಅತ್‌ನಿಂದ ಯಾವುದೇ ಪ್ರಯೋಜನವಿಲ್ಲ.

ಆದ್ದರಿಂದ, ನಾವು ನಮ್ಮ ಒಳಿತುಗಳನ್ನು ಹೆಚ್ಚಿಸುತ್ತಾ ಹೋಗಬೇಕು ಮತ್ತು ಅಲ್ಲಾಹನೊಂದಿಗೆ ವಿಶೇಷ ಸಂಬಂಧವನ್ನು ಬೆಳೆಸಬೇಕು ಮತ್ತು ಇದೇ ನಮ್ಮ ಜೀವನದ ಉದ್ದೇಶವಾಗಿದೆ, ಇದೇ ಜಮಾಅತ್‌ನ ಪ್ರಗತಿಯಲ್ಲಿ ನಮಗೆ ಪ್ರಯೋಜನವನ್ನು ನೀಡುವ ವಿಷಯವಾಗಿದೆ. ಇದೇ ನಮ್ಮನ್ನು ಕಷ್ಟಗಳು ಮತ್ತು ದುಃಖಗಳಿಂದ ರಕ್ಷಿಸುತ್ತದೆ ಮತ್ತು ಇದರಿಂದ ಜಮಾಅತ್, ಇನ್ಶಾ ಅಲ್ಲಾಹ್, ಅಲ್ಲಾಹನು ವಾಗ್ದಾನ ಮಾಡಿದ ಸ್ಥಾನವನ್ನು ತಲುಪುವ ವರೆಗೆ ಪ್ರಗತಿ ಹೊಂದುತ್ತಾ ಹೋಗುತ್ತದೆ.

ಹಝ್ರತ್ ಮಸೀಹ್ ಮೌಊದ(ಅ)ರ ಕಾರ್ಯಗಳಲ್ಲಿ ಮೊದಲನೆಯದು ಅಲ್ಲಾಹನು ದೃಷ್ಟಾಂತಗಳನ್ನು ತೋರಿಸುವುದಾಗಿದೆ. ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ತೋರಿಸಲಾದ ದೃಷ್ಟಾಂತಗಳನ್ನು ಅಲ್ಲಾಹನು ಈಗಲೂ ತೋರಿಸುತ್ತಿದ್ದಾನೆ. ಅಲ್ಲಾಹನು ಸ್ವತಃ ಪ್ರಗತಿಯ ದೃಷ್ಟಾಂತಗಳನ್ನು ತೋರಿಸುತ್ತಿದ್ದಾನೆ ಮತ್ತು ಈಗಲೂ ತೋರಿಸುತ್ತಲೇ ಇದ್ದಾನೆ, ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಅದಕ್ಕೆ ಉತ್ತರಿಸುತ್ತಾನೆ ಹಾಗೂ ಅವನ ಸಹಾಯ ನಮ್ಮೊಂದಿಗಿದೆ ಎಂದು ಸಾಬೀತುಪಡಿಸಲಿಕ್ಕಾಗಿ ಅಲ್ಲಾಹನು ದೃಷ್ಟಾಂತಗಳನ್ನು ತೋರಿಸುತ್ತಿದ್ದಾನೆ. ನನ್ನ ಆಗಮನದ ಎರಡನೆಯ ಉದ್ದೇಶವು ಮನುಷ್ಯನ ಸಂಬಂಧವನ್ನು ಅಲ್ಲಾಹನೊಂದಿಗೆ ಬೆಳೆಸುವುದಾಗಿದೆ. ಒಂದು ಕೃತ್ಯ ಅಲ್ಲಾಹನದಾಗಿರುತ್ತದೆ. ಅದೇನೆಂದರೆ ಹಝ್ರತ್ ಪೈಗಂಬರ್(ಸ)ರೊಡನೆ ಅಲ್ಲಾಹನು ಮಾಡಿದ ವಾಗ್ದಾನವನ್ನು ಅವನು ಈಡೇರಿಸುತ್ತಿದ್ದಾನೆ. ಮತ್ತೊಂದು ಅಲ್ಲಾಹನು ನಮ್ಮ ಮೇಲೆ ಜವಾಬ್ದಾರಿಯನ್ನು ಹೊರಿಸಿದ್ದಾನೆ, ನಾವು ಅವನಿಗೆ ಕೃತಜ್ಞರಾಗಿರಬೇಕು ಮತ್ತು ಅವನ ಆರಾಧನೆಯ ಹಕ್ಕನ್ನು ಪೂರೈಸುವವರಾಗಿರಬೇಕು ಮತ್ತು ನಮ್ಮ ನಂಬಿಕೆಗಳಲ್ಲಿ ಪ್ರಗತಿ ಹೊಂದುವವರಾಗಿರಬೇಕು. ಹೀಗಾಗುವಾಗ ನಾವು ಅಲ್ಲಾಹನ ಅನುಗ್ರಹಗಳನ್ನು ಪಡೆಯುವವರಾಗುತ್ತೇವೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ಗೆ ಬರುವ ನಮ್ಮ ಉದ್ದೇಶವನ್ನು ಪೂರೈಸುವವರಾಗುತ್ತೇವೆ. ಅವರು ಹೇಳುತ್ತಾರೆ: ನಮ್ಮ ಜಮಾಅತಿನವರು ತಮ್ಮ ನಂಬಿಕೆಯನ್ನು ತಮ್ಮ ಈಮಾನನ್ನು ಹೆಚ್ಚಿಸಬೇಕು. ಅಲ್ಲಾಹನಲ್ಲಿ ನಿಜವಾದ ನಂಬಿಕೆ ಮತ್ತು ಜ್ಞಾನವನ್ನು ಬೆಳೆಸಿಕೊಳ್ಳಬೇಕು, ಒಳ್ಳೆಯ ಕಾರ್ಯಗಳಲ್ಲಿ ಸೋಮಾರಿತನ ಮತ್ತು ಆಲಸ್ಯ ಇರಬಾರದು, ಏಕೆಂದರೆ ಸೋಮಾರಿತನವಿದ್ದರೆ ವುಝೂ ಮಾಡುವುದು ಕೂಡ ಕಷ್ಟವಾಗುತ್ತದೆ. ತಹಜ್ಜುದ್ ನಿರ್ವಹಿಸುವುದರ ಬಗ್ಗೆ ಮಾತನಾಡುವುದೇ ಬೇಡ. ಒಳ್ಳೆಯ ಕಾರ್ಯಗಳನ್ನು ಮಾಡುವ ಶಕ್ತಿಯನ್ನು ಬೆಳೆಸದಿದ್ದರೆ ಮತ್ತು ಒಳಿತುಗಳಲ್ಲಿ ಸ್ಪರ್ಧಿಸಲು ಉತ್ಸಾಹವಿಲ್ಲದಿದ್ದರೆ, ನಮ್ಮೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುವುದು ನಿಷ್ಪ್ರಯೋಜಕ. ನಿಮ್ಮಲ್ಲಿ ಬದಲಾವಣೆಯನ್ನು ತರದಿದ್ದರೆ, ಒಳಿತುಗಳನ್ನು ಮಾಡುವ ಹುರುಪು ಮೂಡದಿದ್ದರೆ, ಅಲ್ಲಾಹನ ಆರಾಧನೆಯ ಉತ್ಸಾಹ ಮತ್ತು ಉತ್ತಮ ನೈತಿಕತೆಗಳನ್ನು ತೋರಿಸುವ ಹುರುಪು ಮೂಡದಿದ್ದರೆ, ನನ್ನ ಬೈಅತ್ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ನಮ್ಮ ಬೋಧನೆಗಳನ್ನು ತನ್ನ ಕಾರ್ಯವಿಧಾನವನ್ನಾಗಿ ಮಾಡಿಕೊಂಡು ತನ್ನ ಸಾಮರ್ಥ್ಯ ಮತ್ತು ಪ್ರಯತ್ನಕ್ಕೆ ಅನುಗುಣವಾಗಿ ಅದರ ಪ್ರಕಾರ ನಡೆಯುವವನು ಮಾತ್ರ ನಮ್ಮ ಜಮಾಅತ್‌ಗೆ ಸೇರುತ್ತಾನೆ. ಅಲ್ಲಾಹನು ಈ ಜಮಾಅತನ್ನು ವಿಶೇಷ ಜಮಾಅತ್ ಮಾಡಬೇಕೆಂದು ಉದ್ದೇಶಿಸಿದ್ದಾನೆ ಮತ್ತು ಕೇವಲ ಹೆಸರು ಬರೆಸಿಕೊಳ್ಳುವುದರಿಂದ ಯಾರೂ ಜಮಾಅತ್‌ನಲ್ಲಿ ಉಳಿಯಲು ಸಾಧ್ಯವಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅವನ ಮೇಲೆ ಒಂದು ಸಮಯ ಬರುವುದು, ದುರದೃಷ್ಟವಶಾತ್ ಅವನು ನಮ್ಮಿಂದ ಬೇರ್ಪಡುವನು. ಆದ್ದರಿಂದ, ಸಾಧ್ಯವಾದಷ್ಟು ಮಟ್ಟಿಗೆ, ನೀಡಲಾಗುವ ಬೋಧನೆಗಳ ಪ್ರಕಾರ ಸತ್ಕರ್ಮಗಳನ್ನು ಮಾಡಬೇಕು. ಸತ್ಕರ್ಮಗಳು ರೆಕ್ಕೆಗಳಿದ್ದಂತೆ, ಸತ್ಕರ್ಮಗಳಿಲ್ಲದೆ ಮನುಷ್ಯನು ಆಧ್ಯಾತ್ಮಿಕ ಮಟ್ಟಕ್ಕೆ ಹಾರಲು ಸಾಧ್ಯವಿಲ್ಲ. ಪಕ್ಷಿಗಳು ರೆಕ್ಕೆಗಳಿಂದ ಗಾಳಿಯಲ್ಲಿ ಹಾರುವಂತೆ, ಆಧ್ಯಾತ್ಮಿಕ ಮಟ್ಟವನ್ನು ಹೆಚ್ಚಿಸಲು ಸತ್ಕರ್ಮಗಳು ಅವಶ್ಯಕ. ಸತ್ಕರ್ಮಗಳು ಇದ್ದರೆ ಮಾತ್ರ ಮನುಷ್ಯನು ಮೇಲೆ ಹಾರಬಲ್ಲನು, ಅಲ್ಲಾಹನ ಸಮೀಪಕ್ಕೆ ಹೋಗಬಲ್ಲನು. ಇಲ್ಲದಿದ್ದರೆ ಮನುಷ್ಯನು ಆಧ್ಯಾತ್ಮಿಕ ಮಟ್ಟಕ್ಕೆ ಹಾರಲು ಸಾಧ್ಯವಿಲ್ಲ ಮತ್ತು ಅಲ್ಲಾಹನು ಅವರ ಕೆಳಗೆ ಇರಿಸಿದ ಉನ್ನತ ಉದ್ದೇಶಗಳನ್ನು ಸಾಧಿಸಲು ಸಾಧ್ಯವಿಲ್ಲ. ಪಕ್ಷಿಗಳಲ್ಲಿ ಬುದ್ಧಿವಂತಿಕೆ ಇರುತ್ತದೆ, ಅವುಗಳಲ್ಲಿ ಬುದ್ಧಿ ಇರುತ್ತದೆ, ಅಲ್ಲಾಹನು ಅವುಗಳ ಸಹಜ ಪ್ರವೃತ್ತಿಯಲ್ಲಿ ಇರಿಸಿದ ಬುದ್ಧಿವಂತಿಕೆ ಮತ್ತು ಬುದ್ಧಿಯನ್ನು ಅವು ಬಳಸದಿದ್ದರೆ, ಅವುಗಳಿಂದ ಆಗಬೇಕಾದ ಕಾರ್ಯಗಳು ಆಗುವುದಿಲ್ಲ. ಉದಾಹರಣೆಗೆ, ಜೇನುನೊಣದಲ್ಲಿ ಬುದ್ಧಿವಂತಿಕೆ ಇಲ್ಲದಿದ್ದರೆ, ಅದು ಜೇನುತುಪ್ಪವನ್ನು ತೆಗೆಯಲು ಸಾಧ್ಯವಿಲ್ಲ, ಮತ್ತು ಅದೇ ರೀತಿ, ಸಂದೇಶವಾಹಕ ಪಾರಿವಾಳಗಳು, ಮೊದಲು ಬಹಳಷ್ಟು ಬಳಸಲಾಗುತ್ತಿದ್ದ ಸಂದೇಶಗಳನ್ನು ಕೊಂಡೊಯ್ಯುವ ಪಾರಿವಾಳಗಳು, ತಮ್ಮ ಬುದ್ಧಿವಂತಿಕೆಯನ್ನು ಸ್ವಲ್ಪ ಮಟ್ಟಿಗೆ ಬಳಸಬೇಕಾಗುತ್ತದೆ. ಅವು ಎಷ್ಟು ದೂರದ ಸ್ಥಳಗಳನ್ನು ಕ್ರಮಿಸುತ್ತವೆ ಮತ್ತು ಪತ್ರಗಳನ್ನು ತಲುಪಿಸುತ್ತವೆ, ಅದೇ ರೀತಿ ಪಕ್ಷಿಗಳಿಂದ ಅದ್ಭುತಕರವಾದ ಕೆಲಸಗಳನ್ನು ಮಾಡಲಾಗುತ್ತದೆ. ಆದ್ದರಿಂದ, ಮೊದಲು ಮನುಷ್ಯನು ತನ್ನ ಬುದ್ಧಿವಂತಿಕೆಯನ್ನು ಬಳಸಬೇಕು ಮತ್ತು ನಾನು ಮಾಡಲು ಹೊರಟಿರುವ ಕೆಲಸವು ಅಲ್ಲಾಹನ ಆಜ್ಞೆಗಳ ಪ್ರಕಾರ ಮತ್ತು ಅವನ ಇಚ್ಛೆಗನುಸಾರವಾಗಿದೆಯೇ ಅಥವಾ ಇಲ್ಲವೇ ಎಂದು ಯೋಚಿಸುವುದು ಅವಶ್ಯಕ. ಇದನ್ನು ನೋಡುವಾಗ ಮತ್ತು ಬುದ್ಧಿವಂತಿಕೆಯಿಂದ ಕೆಲಸ ಮಾಡುವಾಗ, ಎಂದರೆ ಕೈಗಳಿಂದ ಸತ್ಕರ್ಮಗಳನ್ನು ಮಾಡುವುದು ಅವಶ್ಯಕ. ತನ್ನ ಕೈಗಳನ್ನು ಚಲಾಯಿಸುವುದು ಅವಶ್ಯಕ. ಮೊದಲು ಯೋಚಿಸಬೇಕು. ನಾನು ಒಳ್ಳೆಯ ಕಾರ್ಯಗಳನ್ನು ಮಾಡಬೇಕು, ಅವುಗಳ ಒಳ್ಳೆಯ ಫಲಿತಾಂಶಗಳು ಉಂಟಾಗುವುದು ಎಂದು ಬುದ್ಧಿವಂತಿಕೆಯಿಂದ ಯೋಚಿಸಬೇಕು. ಅವು ಅಲ್ಲಾಹನ ಆಜ್ಞೆಗಳ ಪ್ರಕಾರ ಇವೆಯೇ ಅಥವಾ ಇಲ್ಲವೇ, ಅನಂತರ ಅವುಗಳ ಪ್ರಕಾರ ನಡೆಯಬೇಕು. ಸೋಮಾರಿತನ ಮತ್ತು ನಿರ್ಲಕ್ಷ್ಯ, ಅಸಡ್ಡೆ ಇರಬಾರದು. ಬೋಧನೆ ಸರಿಯಾಗಿದೆಯೇ ಎಂದು ನೋಡಿಕೊಳ್ಳುವುದು ಅವಶ್ಯಕ. ಕೆಲವೊಮ್ಮೆ ಬೋಧನೆ ಸರಿಯಾಗಿರುತ್ತದೆ, ಆದರೆ ಮನುಷ್ಯನು ತನ್ನ ಅಜ್ಞಾನ ಮತ್ತು ಮೂರ್ಖತನದಿಂದ ಅಥವಾ ಬೇರೆಯವರ ದುಷ್ಟತನ ಮತ್ತು ತಪ್ಪು

ಹೇಳಿಕೆಯಿಂದ ಮೋಸ ಹೋಗುತ್ತಾನೆ. ಇದು ಕೂಡ ಸಂಭವಿಸುತ್ತದೆ, ಕೆಲವೊಮ್ಮೆ ಶೈತಾನನು ಮೋಸಗೊಳಿಸುತ್ತಾನೆ. ಬೋಧನೆಗೆ ಸಂಬಂಧಿಸಿದಂತೆ ಮೋಸ ಉಂಟಾಗುತ್ತೆ, ಅದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಆದ್ದರಿಂದ, ಅಹ್ಮದಿಯಾದವನು ಸತ್ಕರ್ಮಗಳನ್ನು ನಿರ್ವಹಿಸಲು ಮತ್ತು ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸುವುದು ಮತ್ತು ಪ್ರಾಮಾಣಿಕ ಮನಸ್ಸಿನಿಂದ ಯೋಚಿಸುವುದು ಬಹಳ ಅವಶ್ಯಕ. ಮೊದಲು ಪರಿಶೀಲಿಸಿ, ನಂತರ ಅದರ ಬಗ್ಗೆ ಯೋಚಿಸಿ, ಪ್ರಾರ್ಥನೆ ಮಾಡಿ, ನಂತರ ಕಾರ್ಯನಿರ್ವಹಿಸಿ ಮತ್ತು ಉದ್ದೇಶವು ಅಲ್ಲಾಹನ ಇಚ್ಛೆಯನ್ನು ಪಡೆಯುವುದು ಮಾತ್ರ ಆಗಿರಬೇಕು. ನಾವು ಈ ವಿಷಯಗಳ ಪ್ರಕಾರ ಕಾರ್ಯನಿರ್ವಹಿಸುವವರಾಗುವಾಗ ಮಾತ್ರ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ನ ಉದ್ದೇಶಗಳನ್ನು ಪೂರೈಸುವವರಾಗುತ್ತೇವೆ.

ಆರಾಧನೆಗಳ ಗುಣಮಟ್ಟವನ್ನು ಹೆಚ್ಚಿಸಲು ಉಪದೇಶಿಸುತ್ತಾ, ಅವರು ಒಂದೆಡೆ ಹೀಗೆ ಹೇಳಿದರು:

ಅಲ್ಲಾಹನ ಪ್ರೀತಿಯಿಂದ ಪೂರ್ಣ ಪಾಲು ಪಡೆಯಿರಿ. ನಿಜವಾದ ತೌಹೀದ್ ಅದರಿಂದಲೇ ಸ್ಥಾಪನೆಯಾಗುತ್ತದೆ ಮತ್ತು ಅದಕ್ಕಾಗಿ, ಅಲ್ಲಾಹನ ಮೇಲೆ ನಮಗೆ ಪ್ರೀತಿಯಿದೆ ಎಂದೂ ಅವನ ತೌಹೀದನ್ನು ಸ್ಥಾಪಿಸಲು ಬಯಸುತ್ತೇನೆ ಎಂದೂ ನೀವು ಹೇಳಿಕೊಳ್ಳುವ ಸ್ಥಳದಲ್ಲಿ, ಅದರ ದೃಢೀಕರಣವು ಅವಶ್ಯಕವಾಗಿದೆ. ಅದನ್ನು ಸಾಬೀತು ಪಡಿಸುವುದು ಅಗತ್ಯ. ಇದಕ್ಕಾಗಿ ಅಲ್ಲಾಹನ ಮುಂದೆ ಬೀಳುವುದು ಮತ್ತು ಅಂಗಲಾಚುವುದು ಅವಶ್ಯಕ. ಈ ವಿಷಯಗಳು ಇದ್ದಾಗ ಮಾತ್ರ ನಾವು ನಿಜವಾದ ತೌಹೀದನ್ನು ಪೂರೈಸುವವರು, ಅದರ ಪ್ರಕಾರ ನಡೆಯುವವರು ಮತ್ತು ಅದನ್ನು ಹರಡುವವರಾಗುತ್ತೇವೆ.

ಅಲ್ಲಾಹನೊಂದಿಗಿನ ಪ್ರೀತಿ ಎಂಬುದರ ಅರ್ಥವೇನು ಎಂಬುದನ್ನು ವಿವರಿಸುತ್ತಾ, ಅವರು ಹೇಳುತ್ತಾರೆ:

ಇದರ ಅರ್ಥವೇನೆಂದರೆ, ನಿಮ್ಮ ಹೆತ್ತವರು, ನಿಮ್ಮ ಹೆಂಡತಿ, ನಿಮ್ಮ ಮಕ್ಕಳು, ನಿಮ್ಮ ಸ್ವಂತ ಇಚ್ಛೆ, ಪ್ರತಿಯೊಂದಕ್ಕಿಂತಲೂ ಅಲ್ಲಾಹನ ಇಚ್ಛೆಗೆ ಪ್ರಾಮುಖ್ಯತೆ ನೀಡುವುದು. ಖುರ್‌ಆನ್‌ನಲ್ಲಿ ಬಂದಿರುವಂತೆ, **"ಫಝ್ಕುರುಲ್ಲಾಹ ಕಝಿಕ್ರಿಕುಮ್ ಆಬಾ ಉಕುಮ್ ಔ ಅಶದ್ದ ಝಿಕ್ರ"**. ಅಂದರೆ, ನಿಮ್ಮ ತಂದೆಂದಿರನ್ನು ನೀವು ನೆನಪಿಸಿಕೊಳ್ಳುವಂತೆ ಅಲ್ಲಾಹನನ್ನು ನೆನಪಿಸಿಕೊಳ್ಳಿ, ಅದಕ್ಕಿಂತಲೂ ಹೆಚ್ಚು ತೀವ್ರವಾದ ಪ್ರೀತಿಯಿಂದ ನೆನಪಿಸಿಕೊಳ್ಳಿ. ಅಲ್ಲಾಹನನ್ನು ತಂದೆ ಎಂದು ಕರೆಯಲು ಅವನು ನಮಗೆ ಕಲಿಸಲಿಲ್ಲ. ಕ್ರೈಸ್ತರಂತೆ ಮೋಸ ಹೋಗಬಾರದು ಎಂದು ಕಲಿಸಿದ್ದಾನೆ. ಕ್ರೈಸ್ತರಂತೆ ಮೋಸ ಹೋಗಬಾರದು ಮತ್ತು ಅಲ್ಲಾಹನನ್ನು ತಂದೆ ಎಂದು ಕರೆಯಬಾರದು ಎಂದು ಹೇಳಿದ್ದಾನೆ. ಹಾಗಾದರೆ ತಂದೆಗಿಂತ ಕಡಿಮೆ ಪ್ರೀತಿಸಬೇಕು ಎಂದಾಯಿತು ಎಂದು ಯಾರಾದರೂ ಹೇಳಿದರೆ, ಈ ಆಕ್ಷೇಪಣೆಯನ್ನು ನಿವಾರಿಸಲು 'ಅಶದ್ದ ಝಿಕ್ರ' ಇರಿಸಲಾಗಿದೆ. 'ಅಶದ್ದ ಝಿಕ್ರ' ಇಲ್ಲದಿದ್ದರೆ ಆಕ್ಷೇಪಣೆ ಉಂಟಾಗುತ್ತಿತ್ತು, ಆದರೆ ಈಗ ಅದನ್ನು ಪರಿಹರಿಸಲಾಗಿದೆ, ತಂದೆಯನ್ನು ನೆನಪಿಸುವುದಕ್ಕಿಂತ ಹೆಚ್ಚು ನೆನಪಿಸಿರಿ ಎಂದು ಹೇಳುತ್ತಾನೆ. ನಿಜವಾದ ತೌಹೀದನ್ನು ಸ್ಥಾಪಿಸಲು ಅಲ್ಲಾಹನ ಪ್ರೀತಿಯಿಂದ ಪೂರ್ಣ ಪಾಲು ಪಡೆಯುವುದು ಅವಶ್ಯಕ. ಕರ್ಮರೂಪದಲ್ಲಿ ಅದು ಪೂರ್ಣವಾಗುವ ವರೆಗೆ ಈ ಪ್ರೀತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಈ ವಿಷಯವು ಕೇವಲ ಬಾಯಿಯಿಂದ ಸಾಬೀತಾಗುವುದಿಲ್ಲ. ಯಾರಾದರೂ ಸಕ್ಕರೆಯ ಹೆಸರನ್ನು ಹೇಳಿದರೆ ಅವನ ಬಾಯಿ ಸಿಹಿಯಾಗುವುದಿಲ್ಲ. ಕೇವಲ ಹೆಸರನ್ನು ಉಚ್ಚರಿಸುವುದರಿಂದ ಬಾಯಿ ಸಿಹಿಯಾಗುವುದಿಲ್ಲ. ಸಿಹಿ ತಿನಿಸಿನ ಹೆಸರನ್ನು ಹೇಳುವುದರಿಂದ ಬಾಯಿ ಸಿಹಿಯಾಗುವುದಿಲ್ಲ. ಯಾರಾದರೂ ಬಾಯಿಯಿಂದ ಸ್ನೇಹವನ್ನು ಒಪ್ಪಿಕೊಂಡ ನಂತರ ಕಷ್ಟದ ಸಮಯ ಬರುವಾಗ ಅವನಿಗೆ ಸಹಾಯ ಮಾಡದಿದ್ದರೆ ಅವನು ನಿಜವಾದ ಸ್ನೇಹಿತನಾಗಲು ಸಾಧ್ಯವಿಲ್ಲ. ಅದೇ ರೀತಿ, ಅಲ್ಲಾಹನ ತೌಹೀದನ್ನು ಬಾಯಿಯಿಂದ ಒಪ್ಪಿಕೊಂಡರೆ ಮತ್ತು ಅವನೊಂದಿಗಿನ ಪ್ರೀತಿಯನ್ನು ಬಾಯಿಯಿಂದ ಒಪ್ಪಿಕೊಂಡರೆ, ಯಾವುದೇ ಪ್ರಯೋಜನವಿಲ್ಲ, ಆದರೆ ಈ ಬಾಯಿಯ ಒಪ್ಪಿಗೆಗಿಂತ ಪ್ರಾಯೋಗಿಕ ಪಾಲು, ಕೃತ್ಯರೂಪದ ಪಾಲು ಹೆಚ್ಚು ಅಗತ್ಯವಾಗಿದೆ. ಬಾಯಿಯಿಂದ ಒಪ್ಪಿಕೊಳ್ಳುವುದು ಏನೂ ಅಲ್ಲ ಎಂದು ಇದರ ಅರ್ಥವಲ್ಲ. ಬಾಯಿಯ ಒಪ್ಪಿಗೆಯೊಂದಿಗೆ ಪ್ರಾಯೋಗಿಕ ದೃಢೀಕರಣವು ಅವಶ್ಯಕ, ಆದ್ದರಿಂದ ಅಲ್ಲಾಹನ ಮಾರ್ಗದಲ್ಲಿ ನಿಮ್ಮ ಜೀವನವನ್ನು ತ್ಯಾಗ ಮಾಡುವುದು ಅವಶ್ಯಕ. ಇದೇ ಇಸ್ಲಾಂ. ಇದೇ ಉದ್ದೇಶಕ್ಕಾಗಿ ನನ್ನನ್ನು ಕಳುಹಿಸಲಾಗಿದೆ. ಆದ್ದರಿಂದ, ಈ ಉದ್ದೇಶಕ್ಕಾಗಿ ಅಲ್ಲಾಹನು ಹರಿಸಿದ ಈ ಕಾರಂಜಿಯ ಹತ್ತಿರ ಬರದವನು ಖಂಡಿತವಾಗಿಯೂ ವಂಚಿತನಾಗಿರುತ್ತಾನೆ. ಅಲ್ಲಾಹನ ತೌಹೀದನ್ನು ಸ್ಥಾಪಿಸಲು ನಿಮ್ಮ ಜೀವನವನ್ನು ಹಾಗೆ ಮಾಡಬೇಕು. ಅಲ್ಲಾಹನ ಸಂದೇಶವನ್ನು ತಲುಪಿಸಲು, ಬೋಧನೆಗಳ ಪ್ರಕಾರ ನಡೆಯಲು ನಿಮ್ಮ ಜೀವನವನ್ನು ವಖ್ಫ್ ಮಾಡಬೇಕು. ಎಂದರೆ ನಮ್ಮ ಜೀವನವು ಅಲ್ಲಾಹನಿಗಾಗಿ ಇದೆ ಎಂದು ಸ್ಪಷ್ಟವಾಗಿ ಕಾಣುವಂತೆ ಮಾಡಬೇಕು ನಿಮ್ಮ ಜೀವನವನ್ನು ಹಾಗೆ ಮಾಡಿದರೆ ನೀವು ಯಶಸ್ವಿಯಾಗುತ್ತೀರಿ. ನಾವು ಕೇವಲ ಲೌಕಿಕತೆಯನ್ನು ಸಂಪಾದಿಸಬಾರದು. ಬದಲಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ಗೆ ಬಂದು ಲೋಕದಲ್ಲಿ ಅಲ್ಲಾಹನ ತೌಹೀದನ್ನು ಸ್ಥಾಪಿಸಲು ಮತ್ತು ಹರಡಲು ನಾವು ಎಲ್ಲ ಪ್ರಯತ್ನಗಳನ್ನು ಮಾಡಬೇಕು ಮತ್ತು ಈ ಆಲೋಚನೆ ಇದ್ದರೆ ಜಮಾಅತ್‌ನ ಪ್ರತಿಯೊಬ್ಬ ಸದಸ್ಯನು ತನ್ನ ಪಾತ್ರವನ್ನು ನಿರ್ವಹಿಸುವವನಾಗುತ್ತಾನೆ. ಅಂಥಹವನು ಲೋಕದಲ್ಲಿ ಅಲ್ಲಾಹನ ತೌಹೀದ್‌ನ ಧ್ವಜವನ್ನು ಹಾರಿಸಲು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜದ ಕೆಳಗೆ ತರಲು ಪ್ರಯತ್ನಿಸುತ್ತಾನೆ. ಆದ್ದರಿಂದ, ಈ ರಮಝಾನ್‌ನಲ್ಲಿ ನಾವು ಆರಾಧನೆಗಳ ಬಗ್ಗೆ ಗಮನ ಹರಿಸುತ್ತೇವೆ ಮತ್ತು ಉನ್ನತ ನೈತಿಕತೆಗಳ ಬಗ್ಗೆ ಗಮನ ಹರಿಸುತ್ತೇವೆ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುತ್ತೇವೆ ಮತ್ತು ಅಲ್ಲಾಹನ ತೌಹೀದನ್ನು ಹರಡುತ್ತೇವೆ ಎಂದು ಪ್ರತಿಜ್ಞೆ ಮಾಡುವುದರೊಂದಿಗೆ ಹಾಗೆ ಮಾಡಲು ನಾವು ಪ್ರಯತ್ನಿಸಬೇಕು ಮತ್ತು ಈ ಪ್ರಯತ್ನವು ಈ ರಮಝಾನ್ ಮುಗಿದ ನಂತರ ಕೊನೆಗೊಳ್ಳಬಾರದು. ಬದಲಾಗಿ ವರ್ಷಪೂರ್ತಿ ಮುಂದುವರೆಯಬೇಕು. ಇದು ವರ್ಷಪೂರ್ತಿ ಮುಂದುವರಿದರೆ, ನಮ್ಮ ಜೀವನದ ಉದ್ದೇಶವನ್ನು ನಾವು ಸಾಧಿಸಲು ಸಾಧ್ಯವಾಗುತ್ತದೆ ಮತ್ತು ಇದು ಇಲ್ಲದಿದ್ದರೆ, ಅಲ್ಲಾಹನ ಆದೇಶದ ಮೇಲೆ, ಅವನ ಆಜ್ಞೆಯ ಮೇಲೆ, ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಯನ್ನು ಅನುಸರಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ಗೆ ಮಾಡಿರುವುದರಿಂದ ಯಾವುದೇ ಪ್ರಯೋಜನವಿರುವುದಿಲ್ಲ. ಆ ಉದ್ದೇಶವನ್ನು ನಾವು ಸಾಧಿಸಲು ಸಾಧ್ಯವಾಗುವುದಿಲ್ಲ ಮತ್ತು ಅವರನ್ನು ಬೈಅತ್ ಮಾಡುವುದರಿಂದ ನಮಗೆ ಸಿಗಬೇಕಾದ ಅನುಗ್ರಹಗಳಿಂದ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ, ಬೈಅತ್ ಮಾಡಿಕೊಂಡು ನಾವು ನಮ್ಮಲ್ಲಿ ಒಂದು ವಿಶೇಷ ಬದಲಾವಣೆಯನ್ನು ತರಬೇಕು ಮತ್ತು ಈ ರಮಝಾನ್‌ನಲ್ಲಿ ಮಾಡಿದ ಪ್ರಾರ್ಥನೆಗಳು ಮತ್ತು ಗಳಿಸಿದ ಒಳಿತುಗಳನ್ನು ನಮ್ಮ ಜೀವನದ ಭಾಗವಾಗಿಸಲು ಪ್ರಯತ್ನಿಸಬೇಕು ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು.

"ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೇಳುತ್ತಾರೆ:

ನೀವು ಲೌಕಿಕರಂತೆ ಇದ್ದರೆ, ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ನೀವು ನನ್ನ ಕೈಯಲ್ಲಿ ತೌಬಾ ಮಾಡಿದ್ದೀರಿ. ಪಶ್ಚಾತ್ತಾಪ ಮಾಡಿದ್ದೀರಿ. ನನ್ನ ಕೈಯಲ್ಲಿ ತೌಬಾ ಮಾಡುವುದು ಒಂದು ಮರಣವನ್ನು ಬಯಸುತ್ತದೆ, ಇದರಿಂದ ನೀವು ಹೊಸ ಜೀವನದಲ್ಲಿ ಇನ್ನೊಂದು ಜನ್ಮವನ್ನು ಪಡೆಯುತ್ತೀರಿ. ಬೈಅತ್ ಹೃದಯದಿಂದ ಬರದಿದ್ದರೆ, ಅದರಿಂದ ಯಾವುದೇ ಪ್ರಯೋಜನವಿಲ್ಲ. ನನ್ನ ಬೈಅತ್ ಹೃದಯದ ಒಪ್ಪಿಗೆಯನ್ನು ಬಯಸುತ್ತದೆ, ಆದ್ದರಿಂದ ಯಾರು ನನ್ನನ್ನು ಪ್ರಾಮಾಣಿಕ ಹೃದಯದಿಂದ ಸ್ವೀಕರಿಸುತ್ತಾರೋ, ತಮ್ಮ ಪಾಪಗಳಿಗೆ ಪ್ರಾಮಾಣಿಕ ತೌಬಾ ಮಾಡುತ್ತಾರೋ, ಕ್ಷಮಿಸುವವನೂ ಕರುಣಾಮಯಿಯೂ ಆದ ಅಲ್ಲಾಹನು ಖಂಡಿತವಾಗಿಯೂ ಅವರ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಅವನು ತಾಯಿಯ ಹೊಟ್ಟೆಯಿಂದ ಹೊರಬಂದವನಂತೆ ಆಗುತ್ತಾನೆ. ಆಗ ದೇವದೂತರು ಅವನನ್ನು ಸಂರಕ್ಷಿಸುತ್ತಾರೆ. ಒಂದು ಹಳ್ಳಿಯಲ್ಲಿ ಒಬ್ಬ ಒಳ್ಳೆಯ ವ್ಯಕ್ತಿಯಿದ್ದರೆ, ಅಲ್ಲಾಹನು ಅವನ ಒಳಿತಿಗೆ ಬೆಲೆಕೊಟ್ಟು ಆ ಹಳ್ಳಿಯನ್ನು ನಾಶದಿಂದ ರಕ್ಷಿಸುತ್ತಾನೆ. ಆದರೆ ನಾಶ ಬರುವಾಗ, ಅದು ಎಲ್ಲರ ಮೇಲೆ ಬೀಳುತ್ತದೆ, ಆದರೆ ಅವನು ತನ್ನ ದಾಸರನ್ನು ಹೇಗಾದರೂ ರಕ್ಷಿಸುತ್ತಾನೆ. ಅಲ್ಲಾಹನ ರೂಢಿ ಏನೆಂದರೆ, ಒಬ್ಬ ಒಳ್ಳೆಯ ವ್ಯಕ್ತಿಯಿದ್ದರೂ ಇತರರನ್ನು ರಕ್ಷಿಸಲಾಗುತ್ತದೆ. (ಮಲ್‌ಫೂಝಾತ್, ಸಂಪುಟ–3, ಪುಟ–262, 1984)

ಆದ್ದರಿಂದ, ಇಂದಿನ ಜಗತ್ತಿನ ಪರಿಸ್ಥಿತಿಯಲ್ಲಿ, ನಾವು ನಮ್ಮನ್ನು, ನಮ್ಮ ಸಂತಾನಗಳನ್ನು ಮತ್ತು ಜಗತ್ತನ್ನು ರಕ್ಷಿಸಲು ಪ್ರಯತ್ನಿಸಬೇಕು ಹಾಗೂ ಜಗತ್ತಿನಲ್ಲಿ ತೌಹೀದನ್ನು (ಏಕದೇವೋಪಾಸನೆ) ಸ್ಥಾಪಿಸಲು ಪ್ರಯತ್ನಿಸಬೇಕು, ಲೋಕವನ್ನು ಹಝ್ರತ್ ಪೈಗಂಬರ್(ಸ)ರ ಧ್ವಜದ ಕೆಳಗೆ ತರಲು ಪ್ರಯತ್ನಿಸಬೇಕು. ಅದಕ್ಕಾಗಿ ನಾವು ನಮ್ಮಲ್ಲಿ ಸ್ಥಾಯಿಯಾದ ವಿಶೇಷ ಬದಲಾವಣೆಯನ್ನು ಉಂಟುಮಾಡಬೇಕಾಗುವುದು, ಯಾವಾಗಲೂ ಪ್ರಾರ್ಥನೆಗಳನ್ನು ನಮ್ಮ ಜೀವನದ ಭಾಗವಾಗಿಸಬೇಕು. ಹಾಗಾದರೆ ನಾವು ನಮ್ಮನ್ನು ಮತ್ತು ಲೋಕವನ್ನು ರಕ್ಷಿಸಿಕೊಳ್ಳಬಹುದು. ಏಕೆಂದರೆ ಜಗತ್ತು ಬಹಳ ವೇಗವಾಗಿ ನಾಶದ ಕಡೆಗೆ ಸಾಗುತ್ತಿದೆ. ದೇವನು ಇಚ್ಛಿಸಿದರೆ ಜಗತ್ತಿನ ಸುಧಾರಣೆಗಾಗಿ ವ್ಯವಸ್ಥೆಗಳನ್ನು ಮಾಡಬಹುದು. ಅವರ

ಹೃದಯಗಳನ್ನು ತಿರುಗಿಸಿ ಅವರನ್ನು ನಾಶದಿಂದ ರಕ್ಷಿಸಬಹುದು. ಇನ್ನೇನಾದರೂ ನಾಶವು ಸಂಭವಿಸಲಿದ್ದರೆ, ದೇವನು ಸತ್ಯವಿಶ್ವಾಸಿಗಳನ್ನು ಅದರಿಂದ ರಕ್ಷಿಸಲಿ. ಅದಕ್ಕಾಗಿ ದೇವನ ಅನುಗ್ರಹವು ಯಾವಾಗಲೂ ನಮ್ಮ ಮೇಲೆ ಉಂಟಾಗುವ ರೀತಿಯಲ್ಲಿ ನಾವು ನಮ್ಮ ಸತ್ಕರ್ಮಗಳನ್ನು ನಿರ್ವಹಿಸಬೇಕು ಮತ್ತು ರೂಪಿಸಿಕೊಳ್ಳಬೇಕು. ನಮ್ಮ ಆರಾಧನೆಗಳನ್ನು ಹೇಗೆ ಜೀವಂತವಾಗಿರಿಸಬೇಕು, ಅಲ್ಲಾಹನೊಂದಿಗೆ ನಾವು ಹೇಗೆ ಸಂಬಂಧವನ್ನು ಬೆಳೆಸಿಕೊಳ್ಳಬೇಕು, ನಾವು ತಖ್ವದಲ್ಲಿ ಹೇಗೆ ನಡೆಯಬೇಕು, ನಾವು ಉನ್ನತ ನೈತಿಕತೆಗಳನ್ನು ಹೇಗೆ ತೋರಿಸಬೇಕು, ನಾವು ಲೋಕದಲ್ಲಿ ತೌಹೀದನ್ನು ಹೇಗೆ ಸ್ಥಾಪಿಸಬೇಕು, ನಾವು ಲೋಕವನ್ನು ನಾಶದಿಂದ ಹೇಗೆ ರಕ್ಷಿಸಬೇಕು, ಲೋಕದ ನಾಶ ಮತ್ತು ದಾಳಿಗಳಿಂದ ನಮ್ಮನ್ನು ನಾವು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದರ ನಿಜವಾದ ಅರಿವನ್ನು ನಾವು ಹೊಂದುವಂತೆ ಅಲ್ಲಾಹನು ಮಾಡಲಿ. ಹಾಗಾದರೆ ಮತ್ತು ಈ ಭಾವನೆಗಳು ನಮ್ಮಲ್ಲಿ ಉಂಟಾದರೆ ಆಗ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ತಿನ ಹಕ್ಕನ್ನು ಪೂರೈಸಲು ಸಾಧ್ಯವಾಗುವುದು. ನಾವು ಈ ಬೈಅತ್ತಿನ ಹಕ್ಕನ್ನು ಪೂರೈಸುವವರಾಗಲಿ. ಈ ರಮಝಾನ್ ನಮಗೆ ಅನುಗ್ರಹಗಳಿಗೆ ಕಾರಣವಾಗಲಿ. ಅಲ್ಲಾಹನು ತನ್ನ ಕರುಣೆ ಮತ್ತು ಅನುಗ್ರಹದಿಂದ ನಮ್ಮನ್ನು ಅನುಗ್ರಹಿಸಲಿ. ನಮ್ಮ ರಮಝಾನಿನ ಮುಂದಿನ ದಿನಗಳಲ್ಲಿ ಮತ್ತು ಇಡೀ ವರ್ಷ ಮತ್ತು ಮುಂದಿನ ರಮಝಾನಿನ ವರೆಗೆ ನಾವು ಅಲ್ಲಾಹನ ಆರಾಧನೆಯ ಹಕ್ಕನ್ನು ಪೂರೈಸುವವರಾಗಲಿ. ಅವನ ದಾಸರ ಹಕ್ಕುಗಳನ್ನು ಪೂರೈಸುವವರಾಗಲಿ. ಅಲ್ಲಾಹನು ನಮಗೆ ಅದರ ಸೌಭಾಗ್ಯವನ್ನು ನೀಡಲಿ.

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್, 18-04-2025, ಪುಟ-02-07)**

-----------*****-----------

**(ಬದರ್ ಸಂಚಿಕೆ-22ರ ಪುಟ ಸಂಖ್ಯೆ-11ರ ಖುತ್‌ಬ ಜುಮುಅದ ಉಳಿದ ಭಾಗ)**

ಹಝ್ರತ್ ಮಸೀಹ್ ಮೌಊದ್(ಅ) ಜಮಾಅತ್‌ಗೆ ಅನೇಕ ಉಪದೇಶಗಳನ್ನು ನೀಡಿದ್ದಾರೆ. ಅವರು ಹೇಳುತ್ತಾರೆ:

ನನ್ನ ಬೈಅತ್ ಮಾಡಿರುವುದಾದರೆ, ಬೈಅತ್‌ನ ಹಕ್ಕನ್ನು ಪೂರೈಸಲು ನನಗೆ ಇದು ಬೇಕು. ಏನು ಬೇಕು? ಅವರು ಹೇಳುತ್ತಾರೆ: ಪವಿತ್ರ ಖುರ್‌ಆನನ್ನು ಓದಿರಿ, ಆದರೆ ಕಥೆಗಳಂತೆ ಅಲ್ಲ. ಬೈಅತ್ತಿನ ಹಕ್ಕನ್ನು ಪೂರೈಸಬೇಕಾದರೆ ಮೊದಲ ಶರತ್ತು ಏನೆಂದರೆ, ಪವಿತ್ರ ಖುರ್‌ಆನನ್ನು ಓದಬೇಕು, ಆದರೆ ಕಥೆಗಳಂತೆ ಅಲ್ಲ. ಅದನ್ನು ಅರ್ಥಮಾಡಿಕೊಂಡು ಓದಬೇಕು. ಕಳೆದ ಖುತ್ಬದಲ್ಲಿ ಪವಿತ್ರ ಖುರ್‌ಆನ್ ಓದುವುದರತ್ತ ನಾನು ನಿಮ್ಮ ಗಮನವನ್ನು ಸೆಳೆದಿದ್ದೆ. ಹಝ್ರತ್ ಪೈಗಂಬರ್(ಸ)ರ ಉಪದೇಶಗಳನ್ನು ಸಹ ಹೇಳಿದ್ದೆ. ಅದರ ವಿವರಣೆಯಲ್ಲಿ ಒಂದೆಡೆ ಅವರು ಜನರ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಜನರು ಎಷ್ಟು ಮಧುರವಾಗಿ ಖುರ್‌ಆನ್ ಓದುತ್ತಾರೆ. ಉತ್ತಮವಾಗಿ ಓದುತ್ತಾರೆ. ಆದರೆ ಅದು ಅವರ ಗಂಟಲಿನ ಕೆಳಗೆ ಇಳಿಯುವುದಿಲ್ಲ. ಉತ್ತಮವಾಗಿ ಪಾರಾಯಣ ಮಾಡುತ್ತಾರೆ. ಆದರೆ ಮನವರಿಕೆ ಮಾಡಬೇಕಾದ ಸಂಗತಿಯನ್ನು ಮನವರಿಕೆ ಮಾಡುವುದಿಲ್ಲ. ಉತ್ತಮವಾಗಿ ಓದುತ್ತಾರೆ. ಆದರೆ ಅರ್ಥ ಗೊತ್ತೇ ಇಲ್ಲ. ಅವರು ಗಂಟಲಿನಿಂದ ಉತ್ತಮ ಸ್ವರವನ್ನು ಖಂಡಿತವಾಗಿಯೂ ಹೊರಡಿಸುತ್ತಾರೆ. ಹಝ್ರತ್ ಮೌಊದ್(ಅ) ಹೇಳುತ್ತಾರೆ: ದಿಕ್ರ್ ಅಥವಾ ಸ್ಮರಣಿಕೆ ಎಂಬ ಹೆಸರನ್ನು ಸಹ ಹೊಂದಿರುವ ಪವಿತ್ರ ಖುರ್‌ಆನ್ ಮನುಷ್ಯನೊಳಗೆ ಅಡಗಿರುವ ಮತ್ತು ಮರೆತುಹೋದ ಸತ್ಯಗಳನ್ನು ನೆನಪಿಸಲು ಬಂದಿದೆ. ಅವರು ಗಂಟಲಿನಿಂದ ಉತ್ತಮ ಧ್ವನಿಗಳನ್ನು ಹೊರಡಿಸುತ್ತಾರೆ. ಆ ಕಾಲದಲ್ಲಿಯೂ ಈ ಕಾಲದಲ್ಲಿಯೂ ಪವಿತ್ರ ಖುರ್‌ಆನ್ ದಿಕ್ರ್ ಆಗಿದೆ. ಈ ಕಾಲದಲ್ಲೂ ಅದನ್ನು ಕಲಿಸಲು ಆಕಾಶದಿಂದ ಒಬ್ಬ ಶಿಕ್ಷಕ ಬಂದಿದ್ದಾನೆ. **ವ ಆಖರೀನ ಮಿನ್‌ಹುಮ್** ಎಂಬ ಪವಿತ್ರ ಖುರ್‌ಆನಿನ ಭವಿಷ್ಯವಾಣಿಯ ಈಡೇರಿಕೆ ಇಂದು ಆಗಿದೆ. ಆ ವ್ಯಕ್ತಿಯೇ ನಿಮ್ಮ ಮುಂದೆ ಮಾತನಾಡುತ್ತಿದ್ದಾನೆ.

ರಸೂಲ್ ಕರೀಮ್(ಸ)ರ ಭವಿಷ್ಯವಾಣಿಗಳ ಬಗ್ಗೆ ನಾವು ನೋಡೋಣ. ಅವರು ಈ ಕಾಲಘಟ್ಟದ ಬಗ್ಗೆ ಹೀಗೆ ಭವಿಷ್ಯ ನುಡಿದಿದ್ದರು. ಜನರು ಕುರ್‌ಆನ್ ಓದುವರು ಆದರೆ ಅದು ಅವರ ಗಂಟಲಿನ ಕೆಳಗೆ ಇಳಿಯಲಾರದು.

ನಮ್ಮ ವಿರೋಧಿಗಳು ನಮ್ಮನ್ನು ಮಾತ್ರವಲ್ಲ, ಅಲ್ಲಾಹನ ವಾಗ್ದಾನಗಳಿಗೂ ಬೆಲೆಕೊಡುವುದಿಲ್ಲ. ಇವರ ಗಂಟಲಿನ ಕೆಳಗೆ ಕುರ್‌ಆನ್ ಇಳಿಯುವುದಿಲ್ಲ. ಯಾರಾದರೂ ಉಪದೇಶಕನಾಗಿ ಉಪದೇಶಿಸಲು ಪ್ರಯತ್ನಿಸಿದರೆ, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ. ಕನಿಷ್ಠ ಅವರ ಮಾತನ್ನು ಕೇಳಿರಿ. ಅನಗತ್ಯವಾಗಿ ವಿರೋಧಿಸಬೇಡಿ. ಆದರೆ ಅವರಿಗೆ ಹೇಗೆ ಕೇಳಲು ಸಾಧ್ಯ? ಏಕೆಂದರೆ ಕೇಳಲು ಅವರಿಗೆ ಕೇಳುವ ಕಿವಿಗಳು ಇರಬೇಕು. ಆಲಿಸುವ ಶಕ್ತಿ ಇರಬೇಕು, ಹಾಗಾದರೆ ಮಾತ್ರ ಕೇಳಲು ಸಾಧ್ಯವಾಗುವುದು.

ತಾಳ್ಮೆ ಮತ್ತು ಸದ್ಭಾವನೆಯಿಂದ ವರ್ತಿಸಿರಿ. ತಾಳ್ಮೆ ಮತ್ತು ಸದ್ಭಾವನೆಯಿಂದ ವರ್ತಿಸಲು ಅಲ್ಲಾಹನು ಹೇಳುತ್ತಾನೆ. ಆದರೆ ಇವರು ಕೇವಲ ವಿರೋಧಿಸುತ್ತಾರೆ. ಅಲ್ಲಾಹನು ಕೃಪೆದೋರಿ ಭೂಮಿಯ ಕಡೆಗೆ ಗಮನಹರಿಸದೇ ಇರುತ್ತಿದ್ದರೆ ಇಸ್ಲಾಂ ಕೂಡ ಇತರ ಧರ್ಮಗಳಂತೆ ಮೃತದೇಹದಂತೆ ಆಗುತ್ತಿತ್ತು. ಕೇವಲ ಕಥೆಯಂತೆ ಭಾವಿಸಲಾಗುತ್ತಿತ್ತು. ಇಂದು ಇಸ್ಲಾಮನ್ನು ಹೊರತುಪಡಿಸಿ, ಜನರಿಗೆ ಜೀವನವನ್ನು ನೀಡುವ ಯಾವುದೇ ಧರ್ಮವಿಲ್ಲ. ಅಲ್ಲಾಹನು ಯಾವುದೇ ಕೆಲಸವನ್ನು ಯಾವುದಾದರೂ ಮಾಧ್ಯಮಗಳಿಲ್ಲದೇ ಮಾಡುವುದಿಲ್ಲ ಎಂಬುದು ಅಲ್ಲಾಹನ ರೀತಿಯಾಗಿದೆ. ನಾವು ಕಂಡರೂ ಮನವರಿಕೆ ಮಾಡಿದರೂ ಇಲ್ಲದಿದ್ದರೂ ಈ ಕಾರ್ಯವನ್ನು ಮಾಡಲಿಕ್ಕಾಗಿ ಅಲ್ಲಾಹನು ಅನೇಕ ಮಾರ್ಗಗಳನ್ನು ಕೈಗೊಳ್ಳುತ್ತಾನೆ.

"ಅದೇ ರೀತಿ, ಆಕಾಶದಿಂದ ಪ್ರಕಾಶ ಇಳಿಯುತ್ತದೆ, ಅದು ಭೂಮಿಯನ್ನು ತಲುಪುವಾಗ, ಅದು ಕಾರಣಗಳ ರೂಪವನ್ನು ಅಥವಾ ಮಾಧ್ಯಮಗಳ ರೂಪವನ್ನು ಪಡೆದುಕೊಳ್ಳುತ್ತದೆ, ಅಲ್ಲಾಹನು ಪ್ರಕಾಶವನ್ನು ಇಳಿಸುವಾಗ ಅದು ವಿವಿಧ ರೂಪಗಳಲ್ಲಿ ವಿವಿಧ ಮಾಧ್ಯಮಗಳಾಗುತ್ತದೆ, ಆ ಕೆಲಸವನ್ನು ಮಾಡಲು ಅವು ಕಾರಣವಾಗುತ್ತದೆ. ರಸೂಲುಲ್ಲಾಹ್(ಸ)ರ ಕಾಲವು ಕತ್ತಲೆ ಮತ್ತು ದುರ್ಮಾರ್ಗದಿಂದ ತುಂಬಿದ್ದಾಗಿ ಅಲ್ಲಾಹನು ಕಂಡಾಗ ಮತ್ತು ಪ್ರಪಂಚದಾದ್ಯಂತ ದುರ್ಮಾರ್ಗ ಮತ್ತು ಅಂಧಕಾರದ ದಟ್ಟವಾದ ಮೋಡವು ಹರಡಿದಾಗ, ಆ ಕತ್ತಲೆಯನ್ನು ಹೋಗಲಾಡಿಸಲು ಮತ್ತು ದುರ್ಮಾರ್ಗವನ್ನು ಮಾರ್ಗದರ್ಶನ ಮತ್ತು ಸೌಭಾಗ್ಯವಾಗಿ ಪರಿವರ್ತಿಸಲು, ಫಾರಾನ್‌ನ ಪರ್ವತಗಳಲ್ಲಿ ಸಿರಾಜೆ ಮುನೀರ್ ಎಂಬ ಪ್ರಕಾಶಮಾನವಾದ ದೀಪವು ಹೊಳೆಯಿತು, ಅಂದರೆ ರಸೂಲುಲ್ಲಾಹ್(ಸ)ರ ಆಗಮನವಾಯಿತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಕಾಲದಲ್ಲಿ ನಾನು ಬರಲು ಕಾರಣವೇನೆಂದರೆ, ಉಲೇಮಾಗಳ ಕೃತ್ಯಗಳು, ಜನರ ನಡವಳಿಕೆಗಳು, ಮುಸ್ಲಿಮರ ಕೃತ್ಯಗಳು ಆ ಪ್ರಕಾಶವನ್ನು ಮಂದವಾಗಿಸಲು ಪ್ರಯತ್ನಿಸುತ್ತಿದೆ. ಸತ್ಯದಲ್ಲಿ ಅದು ಎಂದಿಗೂ ಮಂದವಾಗಲಿಲ್ಲ, ಆದರೆ ಕಣ್ಣುಗಳಿಂದ ಮರೆಯಾಯಿತು. ಆ ಬೆಳಕು ಇನ್ನೂ ಹೊಳೆಯುತ್ತಿದೆ ಎಂದು ಜಗತ್ತಿಗೆ ಹೇಳಲು ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ, ಅದನ್ನು ಹೇಗೆ ನೋಡಬೇಕು? ಅದನ್ನು ನನ್ನ ಕಣ್ಣುಗಳಿಂದ ನೋಡಬೇಕಾಗುವುದು. ಅದಕ್ಕೆ ಅಲ್ಲಾಹನು ನನ್ನನ್ನು ಮಾಧ್ಯಮವನ್ನಾಗಿ ಮಾಡಿದ್ದಾನೆ. ನನ್ನನ್ನು ಮಾರ್ಗವನ್ನಾಗಿ ಮಾಡಿದ್ದಾನೆ. ನಾನು ಅಲ್ಲಾಹನ ಕಡೆಯಿಂದ ಬಂದಿದ್ದೇನೆ, ನೀವು ನನ್ನನ್ನು ಒಪ್ಪಿಕೊಳ್ಳುತ್ತೀರೋ ಇಲ್ಲವೋ. ಅದು ನಿಮ್ಮ ಇಷ್ಟ. ನಾನು ಅಲ್ಲಾಹನ ಕಡೆಯಿಂದ ಬಂದಿದ್ದೇನೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ನನಗೆ ಅದರ ಬಗ್ಗೆ ಸಂಪೂರ್ಣ ವಿಶ್ವಾಸವಿದೆ ಮತ್ತು ನನ್ನನ್ನು ನಂಬುವವರಿಗೆ ಸಹ ಅದರ ಬಗ್ಗೆ ಸಂಪೂರ್ಣ ವಿಶ್ವಾಸವಿದೆ. ರಸೂಲುಲ್ಲಾಹ್(ಸ)ರ ಅನುಯಾಯಿಯಾಗಿ ಗುಲಾಮನಾಗಿ ಅಲ್ಲಾಹನು ನನ್ನನ್ನು ಈ ಕಾಲಘಟ್ಟದಲ್ಲಿ ಕಳುಹಿಸಿದ್ದಾನೆ.

(ಮಲ್‌ಫೂಝಾತ್, ಸಂಪುಟ-1, ಪುಟ-97-98, 1984)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಇಸ್ಲಾಮಿನ ವಿರೋಧದ ಕಾಲದಲ್ಲಿ ಅಲ್ಲಾಹನು ಸ್ಥಾಪಿಸುವ ಜಮಾಅತ್ ಮಸೀಹ್ ಮೌವೂದ್‌ರ ಜಮಾಅತ್ ಆಗಿರುತ್ತದೆ. ವಿರೋಧಿಗಳನ್ನು ದಮನಿಸಲು ಮತ್ತು ಇಸ್ಲಾಮಿನ ಪುನರುಜ್ಜೀವನಕ್ಕಾಗಿ ಸ್ಥಾಪಿಸಲಾಗುವ ಜಮಾಅತ್ ಮಸೀಹ್ ಮೌವೂದ್ರ ಜಮಾಅತ್ ಆಗಿರುತ್ತದೆ. ಆದ್ದರಿಂದ ಹದೀಸ್‌ಗಳಲ್ಲಿ, ಅಲ್ಲಾಹನು ತನ್ನ ಪ್ರವಾದಿ(ಸ)ರ ಮೂಲಕ ಮಸೀಹ್ ಮೌವೂದ್‌ರ ಹೆಸರನ್ನು ಕಾಸರ್-ಎ-ಸಲೀಬ್ ಎಂದು ಇಟ್ಟಿದ್ದಾನೆ, ಎಂದರೆ ಶಿಲುಬೆಯನ್ನು ಮುರಿಯುವವನು. ಸತ್ಯವೇನೆಂದರೆ, ಪ್ರತಿ ಮುಜದ್ದಿದ್ ಆ ಕಾಲದ ಫಿತ್ನವನ್ನು ಸುಧಾರಿಸಲು ಬರುತ್ತಾರೆ. ಈಗ ಈ ಕಾಲದಲ್ಲಿ ಅಲ್ಲಾಹನಿಗಾಗಿ ಚಿಂತಿಸಿರಿ. ಕ್ರೈಸ್ತಧರ್ಮದ ರಕ್ಷಣೆಗಾಗಿ ಲೇಖನಿ ಮತ್ತು ನಾಲಿಗೆಯಿಂದ ಎಂತೆಂತಹ ಕೆಲಸಗಳನ್ನು ಮಾಡಲಾಗಿದೆ ಎಂದು ನೀವು ನೋಡುವುದಿಲ್ಲವೇ? ಜಗತ್ತಿನ ಪುಟಗಳನ್ನು ಪರಿಶೀಲಿಸಿದರೆ, ಇತರ ಯುಗಗಳಲ್ಲಿ ಇದರ ಬೆಂಬಲಕ್ಕಾಗಿ ಇಂತಹ ಚಟುವಟಿಕೆಗಳು ನಡೆದದ್ದಾಗಿ ಸಾಬೀತುಪಡಿಸಲು ಸಾಧ್ಯವಿಲ್ಲ. ಬೇರೆ ಯಾವುದೇ ಯುಗದಲ್ಲಿ ಇದು ಸಾಬೀತಾಗುವುದಿಲ್ಲ. ಶಿಲುಬೆಯ ಫಿತ್ನದ ಬೆಂಬಲಿಗರ ಕ್ರೈಸ್ತ ಧರ್ಮದ ಬೆಂಬಲಿಗರ ಬರಹಗಳು ತಮ್ಮ ತುತ್ತತುದಿಯನ್ನು ತಲುಪಿವೆ." (ಮಲ್‌ಫೂಝಾತ್, ಸಂಪುಟ-1, ಪುಟ-205-206, 1984)

ಈ ಯುಗದಲ್ಲಿ ಕ್ರೈಸ್ತ ಧರ್ಮವು ಎಲ್ಲೆಡೆ ಬಲವಾಗಿದೆ. ನಾನು ಮೊದಲು ಹೇಳಿದಂತೆ, ಕ್ರೈಸ್ತ ಧರ್ಮದ ಪ್ರಚಾರವು ಜಗತ್ತಿನಾದ್ಯಂತ

ಹರಡುತ್ತಿದೆ ಮತ್ತು ಮುಸ್ಲಿಮರು ಕೂಡ ಕ್ರೈಸ್ತ ಧರ್ಮದ ಮಡಿಲಿಗೆ ಸೇರುತ್ತಿದ್ದಾರೆ. ಈ ಕಾಲದಲ್ಲಿ ನಡೆಯುತ್ತಿರುವ ರೀತಿಯಲ್ಲಿ ಈ ಪ್ರಚಾರವು ಹಿಂದೆಂದೂ ಇಷ್ಟು ತೀವ್ರವಾಗಿ ನಡೆದಿಲ್ಲ. ಆದ್ದರಿಂದ, ಅದನ್ನು ತಡೆಯಲು ಅಲ್ಲಾಹನು ಮಸೀಹ್ ಮೌವೂದ್‌ರನ್ನು ಕಳುಹಿಸಿದ್ದಾನೆ.

"ನೈಜ ಏಕದೇವೋಪಾಸನೆ, ಪ್ರವಾದಿ ಮುಹಮ್ಮದ್(ಸ)ರ ಪವಿತ್ರತೆ, ಗೌರವ ಮತ್ತು ಸತ್ಯಾಸತ್ಯತೆ ಮತ್ತು ಅಲ್ಲಾಹನ ಗ್ರಂಥವಾದ ಪವಿತ್ರ ಕುರ್‌ಆನ್ ಮೇಲೆ ಬಲವಾದ ದಾಳಿಗಳನ್ನು ಮಾಡಲಾಗುತ್ತಿದೆ. ಆದ್ದರಿಂದ ಈಗ, ಈ ಕಾಲಘಟ್ಟದ ಸ್ಥಿತಿಗೆ ಅನುಗುಣವಾಗಿ, ಅಲ್ಲಾಹನ ವಾಗ್ದಾನದ ಪ್ರಕಾರ ಕಾಸರ್-ಎ-ಸಲೀಬ್‌ರನ್ನು ಕಳುಹಿಸುವುದು ಅಗತ್ಯವಾಗಿತ್ತು. ಶಿಲುಬೆಯನ್ನು ಮುರಿಯುವ ಅಗತ್ಯವಿತ್ತು. ನಾವು ಹಾದುಹೋಗುತ್ತಿರುವ ಇಂದಿನ ಕಾಲದಲ್ಲಿ ಕ್ರೈಸ್ತ ಧರ್ಮವು ಅಷ್ಟೊಂದು ಬಲವನ್ನು ಹೊಂದಿಲ್ಲವಾದರೂ, ಹಝ್ರತ್ ಪೈಗಂಬರ್(ಸ)ರ ಪವಿತ್ರತೆ, ಗೌರವ ಮತ್ತು ಸತ್ಯಸಂಧತೆಯ ಮೇಲೆ ದಾಳಿಗಳನ್ನು ಮಾಡಲಾಗುತ್ತಿದೆ ಮತ್ತು ಪವಿತ್ರ ಕುರ್‌ಆನ್ ಮೇಲೂ ದಾಳಿಗಳನ್ನು ಮಾಡಲಾಗುತ್ತಿದೆ ಮತ್ತು ಇಂದು ಎಲ್ಲೆಡೆ ವಿವಿಧ ರೀತಿಯ ಜನರು ಅನುಚಿತ ಕಾರ್ಯಗಳನ್ನು ಮಾಡುತ್ತಿದ್ದಾರೆ, ಅವಮಾನಕರ ಮಾತುಗಳನ್ನು ಆಡುತ್ತಿದ್ದಾರೆ, ಅವರು ನಾಸ್ತಿಕರಾಗಲಿ, ಇಸ್ಲಾಮಿನ ವಿರೋಧಿಗಳಾಗಲಿ, ಅಥವಾ ಯಾವುದೇ ಧರ್ಮಕ್ಕೆ ಸೇರಿದವರಾಗಲಿ, ಅವರೆಲ್ಲರೂ ಇದರಲ್ಲಿ ಮುಂದಿದ್ದಾರೆ. ಮತ್ತು ಇಂದು ಸಹ, ಈ ಜನರ ತಲೆಯನ್ನು ಕೊಯ್ಯುವುದು, ಎಂದರೆ ಅವರಿಗೆ ಸಮರ್ಥನೀಯ ಉತ್ತರಗಳನ್ನು ನೀಡುವುದು ಮತ್ತು ರಸೂಲುಲ್ಲಾಹ್(ಸ)ರ ಗೌರವ, ಪವಿತ್ರತೆ ಮತ್ತು ಸತ್ಯತೆಯನ್ನು ಜಗತ್ತಿಗೆ ಬಹಿರಂಗಪಡಿಸುವುದು ಮತ್ತು ಪವಿತ್ರ ಕುರ್‌ಆನನ್ನು ರಕ್ಷಿಸುವಲ್ಲಿ ಪೂರ್ಣ ಪಾತ್ರವನ್ನು ವಹಿಸುವುದು ಮಸೀಹ್ ಮೌವೂದ್‌ರ ಜಮಾಅತ್‌ನ ಕೆಲಸವಾಗಿದೆ. ಅಲ್ಲಾಹನು ತನ್ನ ವಾಗ್ದಾನವಾದ **"ಇನ್ನಾ ನಹ್ನು ನಝ್ಝಲ್ನ ಝಿಕ್ರ್ ವ ಇನ್ನಾ ಲಹು ಲಹಾಫಿಝೂನ್"** ಮರೆತಿದ್ದಾನೆಯೇ? ಖಂಡಿತವಾಗಿಯೂ ಇಲ್ಲ, ನೆನಪಿಡಿರಿ, ಅಲ್ಲಾಹನ ವಾಗ್ದಾನಗಳು ಸತ್ಯವಾದುದಾಗಿದೆ. ನಾನು ಪವಿತ್ರ ಕುರ್‌ಆನನ್ನು ಇಳಿಸಿದ್ದೇನೆ ಮತ್ತು ನಾನು ಅದನ್ನು ಸಂರಕ್ಷಿಸುತ್ತೇನೆ ಎಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅಲ್ಲಾಹನು ವಾಗ್ದಾನವನ್ನು ಪೂರೈಸುವನು. ಅವನು ತನ್ನ ವಾಗ್ದಾನದ ಪ್ರಕಾರ ಜಗತ್ತಿಗೆ ಒಬ್ಬ ಎಚ್ಚರಿಕೆ ನೀಡುವವನನ್ನು ಕಳುಹಿಸಿದ್ದಾನೆ, ಜಗತ್ತು ಅವರನ್ನು ಒಪ್ಪಿಕೊಳ್ಳಲಿಲ್ಲ, ಆದರೆ ಅಲ್ಲಾಹನು ಖಂಡಿತವಾಗಿಯೂ ಅವನನ್ನು ಅಂಗೀಕರಿಸುವನು ಮತ್ತು ಬಹಳ ಶಕ್ತಿಯುತ ದಾಳಿಗಳಿಂದ ಅವರ ಸತ್ಯತೆಯನ್ನು ಬಹಿರಂಗಪಡಿಸುವನು. ನಾನು ನಿಮಗೆ ಸತ್ಯವನ್ನು ಹೇಳುತ್ತಿದ್ದೇನೆ, ಅಲ್ಲಾಹನ ವಾಗ್ದಾನದ ಪ್ರಕಾರ ನಾನು ಮಸೀಹ್ ಮೌವೂದ್ ಆಗಿ ಬಂದಿದ್ದೇನೆ, ನಿಮಗೆ ಇಷ್ಟವಿದ್ದರೆ ಒಪ್ಪಿಕೊಳ್ಳಿ, ಇಷ್ಟವಿಲ್ಲದಿದ್ದರೆ ನಿರಾಕರಿಸಿರಿ. ಆದರೆ ನಿಮ್ಮ ನಿರಾಕರಣೆಯಿಂದ ಏನೂ ಆಗುವುದಿಲ್ಲ. ಅಲ್ಲಾಹನು ಏನು ನಿರ್ಧರಿಸಿದ್ದಾನೋ ಅದು ಖಂಡಿತವಾಗಿಯೂ ನಡೆಯುವುದು, ಏಕೆಂದರೆ ಅಲ್ಲಾಹನು ಬರಾಹೀನ್‌ನಲ್ಲಿ ಮೊದಲೇ ಹೇಳಿದ್ದಾನೆ, **"ಸದಕಲ್ಲಾಹು ವ ರಸೂಲುಹು ವ ಕಾನ ವಅದನ್ ಮಫ್‌ಊಲಾ"**, ಅಲ್ಲಾಹನು ಮತ್ತು ಅವನ ರಸೂಲ್ ಏನು ಹೇಳಿದ್ದಾರೋ ಅದು ಸತ್ಯವಾಗಿದೆ ಮತ್ತು ಈ ವಾಗ್ದಾನ ಖಂಡಿತವಾಗಿಯೂ ಈಡೇರಬೇಕಾಗಿತ್ತು."

(ಮಲ್‌ಫೂಝಾತ್, ಸಂಪುಟ-1, ಪುಟ-206, 1984)

ಹಝ್ರತ್ ಮಸೀಹ್ ಮೌಊದ್‌ರ ಸತ್ಯವು ಜಗತ್ತಿನಲ್ಲಿ ಹರಡಬೇಕು ಮತ್ತು ಹರಡಿದೆ ಹಾಗೂ ಹರಡುವುದು ಎಂಬುದು ಅಲ್ಲಾಹನ ವಾಗ್ದಾನವಾಗಿದೆ. ಅದನ್ನು ತನ್ನವರು ಅಥವಾ ಅನ್ಯರು ವಿರೋಧಿಸಿದರೂ ಅದರಿಂದ ಯಾವುದೇ ಪರಿಣಾಮ ಉಂಟಾಗದು.

ಮಸೀಹ್ ಮೌಊದ್ ಏಕೆ ಬಂದರು ಎಂದು ಜನರು ಕೇಳುತ್ತಾರೆ. ಅನೇಕ ಮುಸ್ಲಿಮರು ಆಕ್ಷೇಪಿಸುತ್ತಾರೆ, ಮುಸ್ಲಿಮರ ಕೃತ್ಯಗಳು ಒಬ್ಬ ಸುಧಾರಕ ಬರಬೇಕು ಎಂದು ಅಗತ್ಯಪಡಿಸುವುದಿಲ್ಲವೇ?. ಮಸೀಹ್ ಮೌಊದ್ ಏಕೆ ಬಂದರು ಎಂದು ಮೌಲ್ವಿಗಳು ಕೂಗಾಡುತ್ತಾರೆ, ನಿಮ್ಮ ಕೃತ್ಯಗಳನ್ನು ನೋಡಿ. ನಿಮ್ಮ ಕೃತ್ಯಗಳೇ ಸ್ವತಃ ಅದನ್ನು ಅಗತ್ಯಪಡಿಸುತ್ತದೆ. ಅದರ ವಿವರಣೆಯಲ್ಲಿ ಒಂದೆಡೆ ಅವರು ಹೇಳುತ್ತಾರೆ:

"ಮುಸ್ಲಿಂ ಎಂದು ಹೇಳಿಕೊಳ್ಳುವವರ ಕೃತ್ಯಗಳು ಸತ್ಕಾರ್ಯಗಳಾಗಿದ್ದರೆ, ಅದರ ಉತ್ತಮ ಫಲಿತಾಂಶಗಳು ಏಕೆ ಉಂಟಾಗುತ್ತಿಲ್ಲ? ಈ ಜನರು ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ಇಸ್ಲಾಮಿಗೆ ವಿರುದ್ಧವಾದದ್ದು ನಮ್ಮಲ್ಲಿ ಏನಿದೆ ಎಂದು ಅವರು ಕೇಳುತ್ತಾರೆ. ನಾವು "ಲಾ ಇಲಾಹ ಇಲ್ಲಲ್ಲಾಹ್" ಎಂದು ಹೇಳುತ್ತೇವೆ, ನಮಾಝ್‌ಗಳನ್ನು ಸಹ ನಿರ್ವಹಿಸುತ್ತೇವೆ, ರಮಝಾನ್‌ನಲ್ಲಿ ಉಪವಾಸವನ್ನು ಸಹ ಇರಿಸುತ್ತೇವೆ, ಝಕಾತನ್ನು ಸಹ ನೀಡುತ್ತೇವೆ, ಆದರೆ ಅವರ ಎಲ್ಲ ಕಾರ್ಯಗಳು ಸತ್ಕರ್ಮಗಳ ರೂಪದಲ್ಲಿಲ್ಲ, ಆದರೆ ಕೇವಲ ಸಿಪ್ಪೆಯಂತೆ ಇವೆ. ತಿರುಳಿಲ್ಲದ ಒಂದು ಚಿಪ್ಪು. ಅವರ ಕಾರ್ಯಗಳು ಸತ್ಕಾರ್ಯಗಳಾಗಿದ್ದರೆ, ಅವುಗಳ ಫಲಿತಾಂಶಗಳು ಏಕೆ ಉಂಟಾಗುತ್ತಿಲ್ಲ?

ನಾನು ಸತ್ಕಾರ್ಯಗಳಿಗೆ ಫಲಿತಾಂಶಗಳನ್ನು ಉಂಟುಮಾಡುತ್ತೇನೆ ಎಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಹಾಗಾದರೆ ಇದು ಏಕೆ ಸಂಭವಿಸುತ್ತಿಲ್ಲ? ಈ ಕಾಲದಲ್ಲಿ ಮುಸ್ಲಿಮರ ಸ್ಥಿತಿಯು ಶೋಚನೀಯವಾಗಿದೆ ಎಂದು ಗೊತ್ತಾಗುವುದಿಲ್ಲವೇ? ಕೆಲವು ದೌರ್ಬಲ್ಯಗಳು, ಕೆಲವು ಕೊರತೆಗಳು, ಕೆಲವು ನ್ಯೂನತೆಗಳು ಇವೆ ಎಂದು ತೋರುವುದಿಲ್ಲವೇ? ಇದರಿಂದಾಗಿ ಅಲ್ಲಾಹನ ವಾಗ್ದಾನಗಳು ಈಡೇರುತ್ತಿಲ್ಲ. ಎಲ್ಲ ರೀತಿಯ ಕೆಡುಕು ಮತ್ತು ಕಲಬೆರಕೆಯಿಂದ ಮುಕ್ತವಾಗುವಾಗ ಮಾತ್ರ ಅವುಗಳನ್ನು ಸತ್ಕರ್ಮಗಳೆಂದು ಹೇಳಬಹುದಾಗಿದೆ. ಆದರೆ ಅವರಲ್ಲಿ ಈ ಸಂಗತಿಗಳು ಎಲ್ಲಿವೆ?

(ಮಲ್‌ಫೂಝಾತ್, ಸಂಪುಟ-1, ಪುಟ-343, 1984)

ನಮಾಝ್‌ಗಳನ್ನು ನಿರ್ವಹಿಸುತ್ತೇವೆ, ಉಪವಾಸವನ್ನು ಇರಿಸುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ, ಆದರೆ ತಖ್ವವಿಲ್ಲ, ಯಾವುದೇ ದೇವಭಯವಿಲ್ಲ. ತಮ್ಮನ್ನು ತಾವು ಪರೀಕ್ಷಿಸಿಕೊಂಡರೆ, ಈ ಕೆಡುಕುಗಳು ಅವರಲ್ಲಿ ಉಂಟೋ ಇಲ್ಲವೋ ಎಂದು ಗೊತ್ತಾಗುವುದು."

"ಈ ಕಾಲದ ಪರಿಸ್ಥಿತಿಗಳು ಒಬ್ಬ ಸುಧಾರಕನನ್ನು ಬಯಸುತ್ತವೆ. ಇಂದು ಅವರ ಘೋಷಣೆಯೂ ಅದೇ ಆಗಿದೆ, ಇಂದಿಗೂ ಕೆಲವು ಜನರ ಕಡೆಯಿಂದ ಈ ಘೋಷಣೆಯನ್ನು ಕೂಗಲಾಗುತ್ತದೆ, ಒಬ್ಬ ಸುಧಾರಕ ಇರಬೇಕು. ಮುಸ್ಲಿಮರ ಸ್ಥಿತಿಯೆಂದರೆ, ಅವರ ಸುಧಾರಣೆಗಾಗಿ ಯಾರಾದರೂ ಬರಬೇಕು, ಆದರೆ ಅಲ್ಲಾಹನು ಯಾರನ್ನು ಕಳುಹಿಸಿದ್ದಾನೋ ಅವರನ್ನು ಒಪ್ಪಿಕೊಳ್ಳುವುದಿಲ್ಲ. ಈ ಕ್ರೈಸ್ತರು ಯಾವ ರೀತಿ ದಾಳಿ ಮಾಡುತ್ತಿದ್ದಾರೆಯೋ ಅಥವಾ ಇತರ ಧರ್ಮದವರು ದಾಳಿ ಮಾಡುತ್ತಿದ್ದಾರೆಯೋ ಅಥವಾ ನಾಸ್ತಿಕರು ದಾಳಿ ಮಾಡುತ್ತಿದ್ದಾರೆಯೋ ಮತ್ತು ಮುಸ್ಲಿಮರು ಸ್ವತಃ ಧರ್ಮದಿಂದ ದೂರ ಸರಿಯುತ್ತಿದ್ದಾರೆ, ಇದು ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಒಬ್ಬ ಸುಧಾರಕ ಇರಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಆದ್ದರಿಂದ ಅಲ್ಲಾಹನು ಈ ಕಾಲದಲ್ಲಿ ನನ್ನನ್ನು ಆ ಸುಧಾರಕನನ್ನಾಗಿ ಮಾಡಿ ಕಳುಹಿಸಿದ್ದಾನೆ. ಇಂತಹ ಪರಿಸ್ಥಿತಿಗಳಲ್ಲಿ ನಮ್ಮ ಬಳಿ ಯಾವುದೇ ಪುರಾವೆಗಳಿಲ್ಲದಿದ್ದರೂ, ಮಸೀಹ್ ಇನ್ನೂ ಏಕೆ ಬಂದಿಲ್ಲ ಎಂದು ಮುಸ್ಲಿಮರು ಹುಚ್ಚರಂತೆ ಹುಡುಕಬೇಕಾಗಿತ್ತು. ನಾನು ಯಾವುದೇ ಪುರಾವೆಗಳನ್ನು ನೀಡದಿದ್ದರೂ, ಅವರು ಈ ಕಾಲದ ಸ್ಥಿತಿಯನ್ನು ನೋಡಿ ಸ್ವತಃ ಹುಡುಕಬೇಕಾಗಿತ್ತು. ಏಕೆಂದರೆ ಮಸೀಹ್ ಮೌಊದ್‌ರ ಕೆಲಸವು ಶಿಲುಬೆಯನ್ನು ಮುರಿಯುವುದಾಗಿದೆ. ಮಸೀಹ್ ಬಂದು ಕ್ರೈಸ್ತ ಧರ್ಮವನ್ನು ಎದುರಿಸಬೇಕಾಗಿತ್ತು, ಅವರು ನಾಸ್ತಿಕರನ್ನು ಎದುರಿಸಬೇಕಾಗಿತ್ತು, ಈ ಕಾಲದಲ್ಲಿ ಅದರ ಅಗತ್ಯವಿದೆ. ಅವರು ವಾದಿಸಿದ ಸಮಯದಲ್ಲೂ ಮತ್ತು ಈಗಲೂ ಇದರ ಅಗತ್ಯವಿದೆ. ಆದ್ದರಿಂದ ಆಗಮಿಸಬೇಕಾದವರ ಹೆಸರನ್ನು ಮಸೀಹ್ ಮೌವೂದ್ ಎಂದು ಇಡಲಾಗಿದೆ. ಮುಲ್ಲಾಗಳಿಗೆ ಮಾನವಕುಲದ ಒಳಿತಿನ ಬಗ್ಗೆ ಕಾಳಜಿ ಇದ್ದರೆ, ಅವರು ಈಗ ನಮ್ಮೊಂದಿಗೆ ವರ್ತಿಸುತ್ತಿರುವಂತೆ ಅವರು ಖಂಡಿತವಾಗಿಯೂ ಮಾಡುತ್ತಿರಲಿಲ್ಲ. ಅವರು ನಮ್ಮ ವಿರುದ್ಧ ಫತ್ವ ಬರೆಯುವ ಮೂಲಕ ಏನು ಮಾಡಿದ್ದಾರೆಂದು ಯೋಚಿಸಬೇಕಾಗಿತ್ತು, ಅಲ್ಲಾಹನು ಆಗಲಿ ಎಂದು ಹೇಳುವಾಗ ಆಗಬಾರದು ಎಂದು ಯಾರಿಗೆ ಹೇಳಲು ಸಾಧ್ಯ? ನಮ್ಮ ವಿರೋಧಿಗಳಾದ ಈ ಜನರು ಕೂಡ ನಮ್ಮ ಸೇವಕರಾಗಿದ್ದಾರೆ, ಅವರು ಹೇಗಾದರೂ ನಮ್ಮ ಸಂದೇಶವನ್ನು ಪೂರ್ವ ಮತ್ತು ಪಶ್ಚಿಮಕ್ಕೆ ತಲುಪಿಸುತ್ತಾರೆ. ಈ ವಿರೋಧದಿಂದಲೂ ಸಂದೇಶವು ತಲುಪುತ್ತಿದೆ ಮತ್ತು ಅವರ ವಿರೋಧವು ನಮ್ಮ ಪ್ರಚಾರದ ಒಂದು ದೊಡ್ಡ ಮಾಧ್ಯಮವಾಗಿದೆ.

(ಮಲ್‌ಫೂಝಾತ್, ಸಂಪುಟ-1, ಪುಟ-397-398, 1984)

ಹಝ್ರತ್ ಮಸೀಹ್ ಮೌವೂದ್(ಅ)ರ ಜಮಾಅತನ್ನು ಮುಗಿಸಲು ಈ ಜನರು ಎಷ್ಟೇ ಪ್ರಯತ್ನಿಸಿದರೂ, ಅದು ನಮ್ಮ ಸಂದೇಶ ಹರಡಲು ಒಂದು ಮಾಧ್ಯಮವಾಗುತ್ತದೆ.

ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಪ್ರೀತಿಯ ತಾಯಿಗಿಂತ ಹೆಚ್ಚು ಕರುಣಾಮಯಿ. ಅವನ ಸೃಷ್ಟಿ ನಾಶವಾಗಲು ಅವನು ಬಯಸುವುದಿಲ್ಲ. ಅವನು ನಿಮಗೆ ಮಾರ್ಗದರ್ಶನ ಮತ್ತು ಪ್ರಕಾಶದ ಮಾರ್ಗಗಳನ್ನು ತೆರೆಯುತ್ತಾನೆ, ಆದರೆ ನೀವು ಅವುಗಳ ಮೇಲೆ ಹೆಜ್ಜೆ ಹಾಕಲು ಬುದ್ಧಿ ಉಪಯೋಗಿಸಿರಿ ಮತ್ತು ಆತ್ಮವನ್ನು ಶುದ್ಧೀಕರಿಸಿರಿ. ಭೂಮಿಯನ್ನು ನೇಗಿಲು ಮಾಡಿ ಸಿದ್ಧಪಡಿಸುವ ವರೆಗೆ, ಅದರಲ್ಲಿ ಬೀಜವನ್ನು ಬಿತ್ತಲಾಗುವುದಿಲ್ಲ, ಅದೇ ರೀತಿ, ನಿರಂತರ ಪ್ರಯತ್ನದಿಂದ ಆತ್ಮಶುದ್ಧೀಕರಣವಾಗುವ ವರೆಗೆ, ಪರಿಶುದ್ಧವಾದ ಬುದ್ಧಿ ಆಕಾಶದಿಂದ ಇಳಿಯಲು ಸಾಧ್ಯವಿಲ್ಲ. ಈ ಯುಗದಲ್ಲಿ, ಅಲ್ಲಾಹನು ಮಹತ್ತಾದ ಅನುಗ್ರಹವನ್ನು ಇಳಿಸಿದ್ದಾನೆ ಮತ್ತು ತನ್ನ ಧರ್ಮ ಮತ್ತು ಹಝ್ರತ್ ನಬಿ ಕರೀಮ್(ಸ)ರ ಬೆಂಬಲಕ್ಕಾಗಿ ಅಲ್ಲಾಹನು ಅಭಿಮಾನ ತೋರಿಸುತ್ತಾ ನಿಮ್ಮೊಡನೆ ಮಾತನಾಡುತ್ತಿರುವ ಒಬ್ಬ ಮನುಷ್ಯನನ್ನು

ಕಳುಹಿಸಿದ್ದಾನೆ. ಇದರಿಂದ ಅವನು ಜನರನ್ನು ಆ ಬೆಳಕಿನ ಕಡೆಗೆ ಕರೆಯುತ್ತಾನೆ.

ಈ ಕಾಲದಲ್ಲಿ ಇಂತಹ ಪಿತೂರಿ ಮತ್ತು ಗೊಂದಲ ಇಲ್ಲದಿದ್ದರೆ ಮತ್ತು ಧರ್ಮವನ್ನು ಅಳಿಸಲು ಯಾವ ರೀತಿಯ ಪ್ರಯತ್ನಗಳು ನಡೆಯುತ್ತಿಲ್ಲವೆಂದಾಗಿದ್ದರೆ, ಯಾವುದೇ ಹಾನಿ ಇರಲಿಲ್ಲ. ಆದರೆ ಈಗ ನೀವು ನೋಡುತ್ತಿರುವಂತೆ, ಎಲ್ಲ ಸಮುದಾಯಗಳು ಎಲ್ಲ ಕಡೆಯಿಂದಲೂ ಇಸ್ಲಾಮನ್ನು ನಾಶಮಾಡಲು ಯೋಚಿಸುತ್ತಿವೆ. ಇಂದು ಅದು ಇನ್ನೂ ಹೆಚ್ಚಾಗಿದೆ. ಇಸ್ಲಾಮಿನ ವಿರೋಧವಿಲ್ಲದಿದ್ದರೆ, ಮಸೀಹ್ ಮೌವೂದ್ ಬರುವ ಅಗತ್ಯವಿರಲಿಲ್ಲ, ಆದರೆ ಅವರು ವಾದಿಸಿದಾಗ, ಎಂದರೆ, ನೂರ ಮೂವತ್ತಾರು ವರ್ಷಗಳ ಹಿಂದೆ, ಆ ಸಮಯದಿಂದ ಇಂದಿನ ವರೆಗೆ, ವಿರೋಧ ಹೆಚ್ಚುತ್ತಲೇ ಇದೆ ಎಂದು ನಾವು ನೋಡುತ್ತಿದ್ದೇವೆ."

ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ವ್ಯಾಪಾರವನ್ನು ಮಾಡುತ್ತಿದ್ದೇನೆ ಎಂದು ವಿರೋಧಿಗಳು ಹೇಳುತ್ತಾರೆ. ನಾನು ಯಾವುದೇ ಅಂಗಡಿಯನ್ನು ತೆರೆದಿಲ್ಲ. ಮಸೀಹ್ ಮೌವೂದ್‌ರ ಕೆಲಸವು ಧರ್ಮವನ್ನು ಹರಡುವುದು ಮತ್ತು ಧಾರ್ಮಿಕ ವ್ಯವಹಾರವಾಗಿದೆ. ಹೌದು, ನೀವು ಇದನ್ನು ವ್ಯಾಪಾರವೆಂದು ಹೆಸರಿಸಲು ಬಯಸುವುದಾದರೆ, ಇದು ಧರ್ಮದ ವ್ಯವಹಾರವಾಗಿದೆ. ಸತ್ಯವೇನೆಂದರೆ, ನಾವು ಪ್ರಾಪಂಚಿಕ ದೃಷ್ಟಿಯಲ್ಲಿ ಸತ್ತವರಂತೆ ಇದ್ದೇವೆ. ಪ್ರಾಪಂಚಿಕ ವ್ಯಾಪಾರಗಳ ದೃಷ್ಟಿಯಿಂದ ನಮ್ಮ ಉದಾಹರಣೆ ಸತ್ತವರಂತಿದೆ. ನಮ್ಮ ಎಲ್ಲ ವ್ಯವಹಾರವು ಧಾರ್ಮಿಕವಾಗಿದೆ. ಇಸ್ಲಾಮಿನಲ್ಲಿ ಯಾವಾಗಲೂ ಹಿರಿಯರು ಮತ್ತು ಇಮಾಮರು ನಡೆದ ಮಾರ್ಗದಲ್ಲೇ ನಾವು ನಡೆಯುತ್ತೇವೆ. ನಮಗೆ ಯಾವುದೇ ಹೊಸ ಮಾರ್ಗವಿಲ್ಲ, ಜನರ ಅಪಾಯಕಾರಿಯಾದ ತಪ್ಪುನಂಬಿಕೆಗಳನ್ನು ನಾವು ಕಿತ್ತುಹಾಕಲು ಬಯಸುತ್ತೇವೆ. ಅವರ ಹೃದಯದಿಂದ ಅವುಗಳನ್ನು ತೆಗೆದುಹಾಕಲು ನಾವು ಬಯಸುತ್ತೇವೆ, ಏಕೆಂದರೆ ಇದು ನಮ್ಮ ಮೂಲ ಉದ್ದೇಶ ಮತ್ತು ಗುರಿ. ಏಕೆಂದರೆ ಕೆಲವು ತಪ್ಪು ರೀತಿಯ ನವೀನಾಚಾರಗಳು ಇಸ್ಲಾಮಿನಲ್ಲಿ ಹುಟ್ಟಿಕೊಂಡಿವೆ. ನಾವು ಲೋಕವನ್ನು ಮತ್ತು ಮುಸ್ಲಿಮರನ್ನು ಅವುಗಳಿಂದ ರಕ್ಷಿಸಬೇಕು ಮತ್ತು ಪವಿತ್ರ ಕುರ್‌ಆನ್‌ನ ಬೋಧನೆಯಾದ ನಿಜವಾದ ಧರ್ಮವನ್ನು ನಾವು ಪ್ರಚಲಿತಗೊಳಿಸಬೇಕು. ನನ್ನ ಬರುವಿಕೆಯ ಉದ್ದೇಶ ಇದೇ ಆಗಿದೆ. ಅದೇ ರೀತಿ ಸುಳ್ಳು ಧರ್ಮಗಳಾದ ಇತರ ಧರ್ಮಗಳ ನಿಜವಾದ ಅವಸ್ಥೆಯನ್ನು ನಾನು ಬಹಿರಂಗಪಡಿಸಬೇಕಾಗಿದೆ. ಇದು ನನ್ನ ಉದ್ದೇಶವಾಗಿದೆ. ಇಸ್ಲಾಮಿನ ಪ್ರಕಾಶವನ್ನು ಪ್ರಕಟಪಡಿಸುವುದು ನನ್ನ ಉದ್ದೇಶವಾಗಿದೆ. ಜಗತ್ತಿನಲ್ಲಿ ರಸೂಲುಲ್ಲಾಹ್(ಸ)ರ ಸ್ಥಾನಮಾನವನ್ನು ಸ್ಥಾಪಿಸುವುದು ನನ್ನ ಉದ್ದೇಶವಾಗಿದೆ. (ಮಲ್‌ಫೂಝಾತ್, ಸಂಪುಟ-5, ಪುಟ-167, 1984) (ಮಲ್‌ಫೂಝಾತ್, ಸಂಪುಟ-1, ಪುಟ-310, 1984)

ರಸೂಲುಲ್ಲಾಹ್(ಸ)ರ ಸ್ಥಾನದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರು ಒಂದೆಡೆ ಹೇಳುತ್ತಾರೆ:

"ಪವಿತ್ರ ಗ್ರಂಥವನ್ನು ಕಳುಹಿಸುವುದು, ಅಂದರೆ ಪವಿತ್ರ ಕುರ್‌ಆನನ್ನು ಕಳುಹಿಸುವುದು ಮತ್ತು ರಸೂಲುಲ್ಲಾಹ್(ಸ)ರನ್ನು ಕಳುಹಿಸುವುದರಿಂದ ಜಗತ್ತಿಗೆ ಒಂದು ಭವ್ಯವಾದ ಕರುಣೆಯ ಮಾದರಿಯನ್ನು ತೋರಿಸಬೇಕೆಂದು ಅಲ್ಲಾಹನು ಬಯಸಿದ್ದಾನೆ. ಹಝ್ರತ್ ಪೈಗಂಬರ್(ಸ)ರನ್ನು ಕಳುಹಿಸುವುದರಿಂದ ಒಂದು ಭವ್ಯವಾದ ಕರುಣೆಯ ಮಾದರಿಯನ್ನು ತೋರಿಸಲು ಬಯಸುತ್ತಾನೆ. **ವಮಾ ಅರ್ಸಲ್ನಾಕ ಇಲ್ಲಾ ರಹಮತ್ ಲಿಲ್ ಆಲಮೀನ್'** ಎಂದು ಹೇಳಿದಂತೆ. ಮತ್ತು ಪವಿತ್ರ ಕುರ್‌ಆನನ್ನು ಕಳುಹಿಸುವ ಉದ್ದೇಶವು **'ಹುದನ್ ಲಿಲ್ ಮುತ್ತಕೀನ್'** ಎಂದು ಹೇಳಲಾಗಿದೆ. ಇವುಗಳು ಅದರ ಭವ್ಯವಾದ ಉದ್ದೇಶಗಳಾಗಿವೆ, ಸಕಲ ಪ್ರವಾದಿಗಳಲ್ಲಿ ಇರುವ ಎಲ್ಲ ವಿಭಿನ್ನ ಗುಣಗಳನ್ನು ಹಝ್ರತ್ ಪೈಗಂಬರ್(ಸ)ರ ಅಸ್ತಿತ್ವದಲ್ಲಿ ಒಟ್ಟುಗೂಡಿಸಲಾದಂತೆ, ವಿವಿಧ ಗ್ರಂಥಗಳಲ್ಲಿ ಇದ್ದ ಎಲ್ಲ ಒಳಿತುಗಳು ಮತ್ತು ಶ್ರೇಷ್ಠ ಗುಣಗಳನ್ನು ಪವಿತ್ರ ಖುರ್‌ಆನಿನಲ್ಲಿ ಸಂಗ್ರಹಿಸಿದಂತೆ, ಎಲ್ಲ ಸಮುದಾಯಗಳ ಎಲ್ಲ ಶ್ರೇಷ್ಠ ಗುಣಗಳನ್ನು ಮುಸ್ಲಿಂ ಸಮುದಾಯದಲ್ಲಿ ಸಂಗ್ರಹಿಸಿದ್ದಾನೆ. ಆದ್ದರಿಂದ, ನಾವು ಆ ಪರಿಪೂರ್ಣತೆಗಳನ್ನು ಪಡೆಯಬೇಕೆಂದು ಅಲ್ಲಾಹನು ಬಯಸುತ್ತಾನೆ. ಆ ಭವ್ಯವಾದ ಪರಿಪೂರ್ಣತೆಗಳನ್ನು ನಮಗೆ ನೀಡಲು ಅವನು ಬಯಸುವಂತೆಯೇ, ಅದಕ್ಕೆ ಅನುಗುಣವಾಗಿ ಅವನು ನಮಗೆ ಶಕ್ತಿಗಳನ್ನು ನೀಡಿದ್ದಾನೆ ಎಂಬುದನ್ನು ಮರೆಯಬಾರದು. ಏಕೆಂದರೆ ಅದಕ್ಕೆ ಅನುಗುಣವಾಗಿ ಶಕ್ತಿಗಳನ್ನು ನೀಡದಿದ್ದರೆ, ನಾವು ಆ ಪರಿಪೂರ್ಣತೆಗಳನ್ನು ಯಾವುದೇ ರೀತಿಯಲ್ಲಿ ಮತ್ತು ಪರಿಸ್ಥಿತಿಯಲ್ಲಿ ಪಡೆಯಲು ಸಾಧ್ಯವಿಲ್ಲ. (ಮಲ್‌ಫೂಝಾತ್, ಸಂಪುಟ-1, ಪುಟ-340-341, 1984)

ಅಲ್ಲಾಹನು ನಮಗೆ ಶಕ್ತಿಗಳನ್ನು ನೀಡಿರುವಾಗ ಮತ್ತು ಶಿಕ್ಷಣವನ್ನು ನೀಡಿರುವಾಗ ಮತ್ತು ಈ ಉದ್ದೇಶವನ್ನು ವಿವರಿಸಿರುವಾಗ, ಅವುಗಳನ್ನು ಪಡೆಯಲು ನಾವು ಎಲ್ಲ ಪ್ರಯತ್ನಗಳನ್ನು ಮಾಡುವುದು ನಮ್ಮ ಕೆಲಸವಾಗಿದೆ ಮತ್ತು ಈ ಲೋಕಕ್ಕೆ ಬರುವ ನನ್ನ ಉದ್ದೇಶ ಇದೇ ಆಗಿದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಆದ್ದರಿಂದ, ನನ್ನ ವಿರೋಧವನ್ನು ಮಾಡುವುದಕ್ಕೆ ಬದಲಾಗಿ ಈ ವಿಷಯಗಳ ಬಗ್ಗೆ ಯೋಚಿಸಬೇಕು ಮತ್ತು ರಸೂಲುಲ್ಲಾಹ್(ಸ)ರ ಬೋಧನೆ ಮತ್ತು ಅವರು ತಂದ ಶರೀಅತನ್ನು ನಾವು ಜಗತ್ತಿನಲ್ಲಿ ಹೇಗೆ ಹರಡಬಹುದು ಎಂಬುದನ್ನು ನೋಡಬೇಕು. ರಸೂಲುಲ್ಲಾಹ್(ಸ) ಪರಿಪೂರ್ಣ ಪ್ರವಾದಿ ಆಗಿದ್ದಾರೆ. ಅಲ್ಲಾಹನು ನಮಗೆ ಖಾತಮುಲ್ ಮುಮಿನೀನ್, ಖಾತಮುಲ್ ಆರಿಫೀನ್ ಮತ್ತು ಖಾತಮುನ್ನಬಿಯೀನ್ ಆಗಿರುವ ಪ್ರವಾದಿಯನ್ನು ನೀಡಿದ್ದಾನೆ ಮತ್ತು ಅದೇ ರೀತಿ ಎಲ್ಲ ಗ್ರಂಥಗಳನ್ನು ಒಳಗೊಂಡಿರುವ ಮತ್ತು ಎಲ್ಲ ಗ್ರಂಥಗಳ ಕೊನೆಯ ಗ್ರಂಥವನ್ನು ಅವರ ಮೇಲೆ ಇಳಿಸಿದ್ದಾನೆ. ರಸೂಲುಲ್ಲಾಹ್(ಸ) ಖಾತಮುನ್ನಬಿಯೀನ್ ಆಗಿದ್ದಾರೆ ಮತ್ತು ಅವರ ಮೇಲೆ ಪ್ರವಾದಿತ್ವವು ಕೊನೆಗೊಂಡಿದೆ. ಆದರೆ ಈ ಪ್ರವಾದಿತ್ವವು ಗಂಟಲು ಹಿಸುಕಿದಂತೆ ಕೊನೆಗೊಂಡಿಲ್ಲ. ಅಂತಹ ಅಂತ್ಯವು ಹೆಮ್ಮೆಪಡುವಂತಹುದಲ್ಲ, ರಸೂಲುಲ್ಲಾಹ್(ಸ)ರ ಮೇಲೆ ಪ್ರವಾದಿತ್ವವು ಕೊನೆಗೊಂಡಿದೆ ಎಂದರೆ, ನೈಸರ್ಗಿಕವಾಗಿ ಅವರ ಮೇಲೆ ಪ್ರವಾದಿತ್ವದ ಪರಿಪೂರ್ಣತೆಗಳು ಕೊನೆಗೊಂಡಿವೆ, ಅಂದರೆ ಆದಮ್‌ನಿಂದ ಮಸೀಹ್ ಇಬ್ನ್ ಮರ್ಯಮ್ ವರೆಗಿನ ಪ್ರವಾದಿಗಳಿಗೆ ನೀಡಲಾದ ಎಲ್ಲ ವಿಭಿನ್ನ ಪರಿಪೂರ್ಣತೆಗಳನ್ನು ಅವರ ಮೇಲೆ ಒಟ್ಟುಗೂಡಿಸಲಾಗಿದೆ ಮತ್ತು ಈ ರೀತಿಯಲ್ಲಿ ಅವರು ಸಹಜವಾಗಿಯೇ ಖಾತಮುನ್ನಬಿಯೀನ್ ಆದರು. ಅದೇ ರೀತಿ ವಿವಿಧ ಪುಸ್ತಕಗಳಲ್ಲಿ ಜಾರಿಯಲ್ಲಿದ್ದ ಎಲ್ಲಾ ಬೋಧನೆಗಳು, ಆಜ್ಞೆಗಳು ಮತ್ತು ಜ್ಞಾನಗಳು ಪವಿತ್ರ ಕುರ್‌ಆನ್‌ನೊಂದಿಗೆ ಕೊನೆಗೊಂಡವು. ಹೀಗೆ ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಆಯಿತು."

(ಮಲ್‌ಫೂಝಾತ್, ಸಂಪುಟ-1, ಪುಟ-341-342, 1984)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ರಸೂಲುಲ್ಲಾಹ್(ಸ)ರನ್ನು ಖಾತಮುನ್ನಬಿಯೀನ್ ಎಂದು ನಾವು ಒಪ್ಪಿಕೊಳ್ಳುವುದಿಲ್ಲ ಎಂಬ ಆರೋಪವನ್ನು ನನ್ನ ಮೇಲೆ ಮತ್ತು ನನ್ನ ಜಮಾಅತ್‌ನ ಮೇಲೆ ಮಾಡಲಾಗಿದೆ. ಇದು ನಮ್ಮ ಮೇಲೆ ಹೊರಿಸಲಾಗಿರುವ ದೊಡ್ಡ ಸುಳ್ಳು ಆಗಿದೆ. ರಸೂಲುಲ್ಲಾಹ್(ಸ)ರನ್ನು ಖಾತಮುನ್ನಬಿಯೀನ್ ಎಂದು ನಾವು ಯಾವ ಬಲವಾದ ವಿಶ್ವಾಸ, ಜ್ಞಾನ ಮತ್ತು ಒಳನೋಟದಿಂದ ಒಪ್ಪಿಕೊಳ್ಳುತ್ತೇವೆ ಮತ್ತು ನಂಬುತ್ತೇವೆಯೋ ಅದರ ಒಂದು ಲಕ್ಷದಷ್ಟು ಭಾಗವನ್ನು ಕೂಡ ಇತರ ಜನರು ಒಪ್ಪಿಕೊಳ್ಳುವುದಿಲ್ಲ ಮತ್ತು ಅವರಿಗೆ ಅಂತಹ ಸಾಮರ್ಥ್ಯವಿಲ್ಲ. ಖಾತಮುನ್ನಬಿಯ್ಯೀನ್‌ನಲ್ಲಿರುವ ಸತ್ಯ ಮತ್ತು ರಹಸ್ಯವನ್ನು ಅವರು ಅರ್ಥಮಾಡಿಕೊಳ್ಳುವುದಿಲ್ಲ. ಅವರು ಕೇವಲ ತಂದೆ-ತಾತಂದಿರಿಂದ ಒಂದು ಪದವನ್ನು ಕೇಳಿದ್ದಾರೆ, ಆದರೆ ಅದರ ಸತ್ಯದ ಬಗ್ಗೆ ಅಜ್ಞಾನಿಗಳಾಗಿದ್ದಾರೆ. ಖತಮುನ್ನುಬುವ್ವತ್ ಎಂದರೇನು ಮತ್ತು ಅದರ ಮೇಲೆ ನಂಬಿಕೆ ಇಡುವ ಅರ್ಥವೇನು ಎಂದು ಅವರಿಗೆ ತಿಳಿದಿಲ್ಲ, ಆದರೆ ಅಲ್ಲಾಹನು ಚೆನ್ನಾಗಿ ಬಲ್ಲನು. ನಾವು ಸಂಪೂರ್ಣ ಒಳನೋಟದಿಂದ, ರಸೂಲುಲ್ಲಾಹ್(ಸ)ರನ್ನು ಖಾತಮುಲ್ ಅನ್ಬಿಯಾ ಎಂದು ನಂಬುತ್ತೇವೆ ಮತ್ತು ಅಲ್ಲಾಹನು ಖತಮುನ್ನುಬುವ್ವತ್ತಿನ ಸತ್ಯವನ್ನು ನಮಗೆ ಬಹಿರಂಗಪಡಿಸಿದ್ದಾನೆ, ಆ ಜ್ಞಾನದ ಪಾನೀಯದಿಂದ ನಮಗೆ ನೀಡಲಾದ ವಿಶೇಷ ಆನಂದವನ್ನು ನಾವು ಪಡೆಯುತ್ತೇವೆ, ಆ ಬುಗ್ಗೆಯಿಂದ ಸಾಕಷ್ಟು ನೀರು ಕುಡಿದವರನ್ನು ಹೊರತುಪಡಿಸಿ ಬೇರೆಯವರು ಅದರ ಅಂದಾಜು ಮಾಡಲು ಸಾಧ್ಯವಿಲ್ಲ." (ಮಲ್‌ಫೂಝಾತ್, ಸಂಪುಟ-1, ಪುಟ-341-342, 1984)

ಒಟ್ಟಿನಲ್ಲಿ ಇದಾಗಿದೆ ಹಝ್ರತ್ ಪೈಗಂಬರ್(ಸ)ರ ಬೋಧನೆ, ಇದಾಗಿದೆ ಅವರ ಸ್ಥಾನ ಮತ್ತು ಇದಕ್ಕಾಗಿ ಹಝ್ರತ್ ಮಸೀಹ್ ಮೌವೂದ್(ಅ) ಆಗಮಿಸಿದ್ದರು. ಇದಕ್ಕಾಗಿ ಅವರು ಜಮಾಅತನ್ನು ಸ್ಥಾಪಿಸಿದರು. ಅದಕ್ಕಾಗಿ ಅವರು ಜಮಾಅತಿನವರೊಡನೆ ತ್ಯಾಗಗಳನ್ನು ಮಾಡಲು ಮತ್ತು ಈ ಸಂದೇಶವನ್ನು ಜಗತ್ತಿಗೆ ತಲುಪಿಸಲು ಮತ್ತು ಹಝ್ರತ್ ಖಾತಮುಲ್ ಅನ್ಬಿಯಾ(ಸ)ರ ಧರ್ಮವನ್ನು ಇಡೀ ಜಗತ್ತಿನಲ್ಲಿ ಹರಡಲು ಆಜ್ಞಾಪಿಸಿದರು. ಹಝ್ರತ್ ಖಾತಮುಲ್ ಅನ್ಬಿಯಾ(ಸ)ರ ಆಳ್ವಿಕೆಯನ್ನು ಜಗತ್ತಿನಲ್ಲಿ ಸ್ಥಾಪಿಸುವ ವರೆಗೆ ಮತ್ತು ಏಕೈಕ ದೇವನ ಆಳ್ವಿಕೆಯನ್ನು ಜಗತ್ತಿನಲ್ಲಿ ಸ್ಥಾಪಿಸುವ ವರೆಗೆ ಸುಮ್ಮನೆ ಕುಳಿತುಕೊಳ್ಳಬಾರದು ಎಂದು ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶ ಇದೇ ಆಗಿತ್ತು. ಈ ಧರ್ಮದ ಪ್ರಾಮುಖ್ಯತೆ ಇದೇ ಆಗಿದೆ, ನಾವು ಈ ಧರ್ಮದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡರೆ ಮತ್ತು ನಮ್ಮನ್ನು ನಾವು ಬೈಅತ್‌ನ ಹಕ್ಕನ್ನು ಪೂರೈಸುವವರೆಂದು ಪರಿಗಣಿಸುವುದಾದರೆ ನಾವು ಸಹ ಈ ವಿಷಯಗಳ ಬಗ್ಗೆ ಯೋಚಿಸಬೇಕು

ಮತ್ತು ನಾವು ಈ ಕೆಲಸಗಳನ್ನು ಮಾಡುವಾಗ, ನಮ್ಮ ಜೀವನದ ಉದ್ದೇಶವಾದ ಗುರಿಯನ್ನು ನಾವು ಪಡೆಯುತ್ತೇವೆ ಮತ್ತು ನಮ್ಮ ಬೈಅತ್‌ನ ಉದ್ದೇಶವನ್ನು ಮತ್ತು ಗುರಿಯನ್ನು ಪಡೆಯುತ್ತೇವೆ. ನಾವು ಅಲ್ಲಾಹನ ಸಂಪ್ರೀತಿ ಮತ್ತು ಸಾಮೀಪ್ಯವನ್ನು ಪಡೆಯುತ್ತೇವೆ.

ರಮಝಾನ್ ದಿನಗಳಲ್ಲಿ ಪ್ರಾರ್ಥನೆಗಳ ಮೂಲಕ ಮತ್ತು ನಮ್ಮ ಜ್ಞಾನವನ್ನು ಹೆಚ್ಚಿಸುವ ಮೂಲಕ ಮತ್ತು ಪವಿತ್ರ ಕುರ್‌ಆನ್‌ನ ಜ್ಞಾನವನ್ನು ಕಲಿಯುವ ಮೂಲಕ ಮತ್ತು ಸಂದೇಶವನ್ನು ತಲುಪಿಸುವ ಮೂಲಕ, ನಾವು ಈ ಕೆಲಸದಲ್ಲಿ ತೊಡಗಬೇಕು, ಇದರಿಂದ ನಾವು ಈ ಲೋಕದಲ್ಲಿ ರಸೂಲುಲ್ಲಾಹ್(ಸ)ರ ಧ್ವಜವನ್ನು ಹಾರಿಸುವವರಾಗಬಹುದು ಮತ್ತು ಜಗತ್ತನ್ನು ಏಕೈಕ ದೇವನ ಮುಂದೆ ತಲೆಬಾಗಿಸುವವರಾಗಬಹುದು. ಅಲ್ಲಾಹನು ನಮಗೆ ಆ ಸೌಭಾಗ್ಯವನ್ನು ನೀಡಲಿ.

ಕೊನೆಗೆ ಪಾಕಿಸ್ತಾನದ ಅಹ್ಮದಿಯರಿಗಾಗಿ ನಾನು ದುಆ ಮಾಡಬೇಕೆಂದು ಮನವಿ ಮಾಡಲು ಬಯಸುತ್ತೇನೆ. ಅಲ್ಲಾಹನು ಅವರ ಸ್ಥಿತಿಗಳನ್ನು ಸುಧಾರಿಸಲಿ. ಇತ್ತೀಚೆಗೆ ವಿರೋಧಿಗಳು ತಮ್ಮ ಎಲ್ಲ ಶಕ್ತಿಯನ್ನು ಬಳಸುತ್ತಿದ್ದಾರೆ. ಎಲ್ಲ ವಿಧಗಳ ಕಷ್ಟಗಳನ್ನು ನೀಡಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಸಿಗುವ ಯಾವುದೇ ನೆಪವನ್ನು ಬಳಸಿಕೊಂಡು ಅಹ್ಮದಿಯರಿಗೆ ಹಾನಿ ಮಾಡುವುದು ಅವರ ಉದ್ದೇಶವಾಗಿದೆ. ಅಲ್ಲಾಹನು ಅವರೆಲ್ಲರನ್ನೂ ರಕ್ಷಿಸಲಿ. ಮುಸ್ಲಿಂ ಸಮುದಾಯಕ್ಕಾಗಿ ದುಆ ಮಾಡಿರಿ, ಅಲ್ಲಾಹನು ಅವರಿಗೆ ಬುದ್ಧಿ ಮತ್ತು ತಿಳುವಳಿಕೆಯನ್ನು ನೀಡಲಿ ಮತ್ತು ಅವರ ಪರಿಸ್ಥಿತಿಗಳನ್ನು ಸುಧಾರಿಸಲಿ, ಅವರ ಮೇಲೆ ಕರುಣೆ ತೋರಿಸಲಿ. ಮಧ್ಯಪ್ರಾಚ್ಯದ ಮುಸ್ಲಿಮರ ಮೇಲೆ ದಬ್ಬಾಳಿಕೆಯ ಮತ್ತೊಂದು ಅಧ್ಯಾಯ ಪುನಃ ಪ್ರಾರಂಭವಾಗಿದೆ. ಅಲ್ಲಾಹನು ಅವರನ್ನು ಈ ದೌರ್ಜನ್ಯಗಳಿಂದ ರಕ್ಷಿಸಲಿ. ಅವರ ಮೇಲೆ ಕರುಣೆದೋರಲಿ.

**(ಅಲ್–ಫಝ್ಲ್ ಇಂಟರ್‌ನ್ಯಾಷನಲ್, 11–04–2025, ಪುಟ–2–8)**

--------------*****--------------

## ದಾರುಸ್ಸನಾಅತ್ ಖಾದಿಯಾನ್‌ನಲ್ಲಿ (Ahmadiyya Vocational Training Centre) 2025–2026ನೇ ಸಾಲಿನ ಪ್ರವೇಶಾತಿಗಳು ಪ್ರಾರಂಭವಾಗಿದೆ

ದಾರುಸ್ಸನಾಅತ್ ಖಾದಿಯಾನ್ ಅನ್ನು 2010 ರಲ್ಲಿ ಹಝ್ರತ್ ಖಲೀಫತುಲ್ ಮಾಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಅನುಮೋದನೆ ಮತ್ತು ವಿಶೇಷ ಮಾರ್ಗದರ್ಶನದೊಂದಿಗೆ ಸ್ಥಾಪಿಸಲಾಯಿತು. ಅಹ್ಮದಿ ವಿದ್ಯಾರ್ಥಿಗಳನ್ನು ಕುಶಲರನ್ನಾಗಿ ಮಾಡುವುದು ಮತ್ತು ತಾಂತ್ರಿಕ ಕೋರ್ಸ್‌ಗಳನ್ನು ಕಲಿಸುವ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಸಂಸ್ಥೆಯ ವಿಶೇಷ ಗುರಿಯಾಗಿದೆ. ದಾರುಸ್ಸನಾಅತ್ ಖಾದಿಯಾನ್ ಸರ್ಕಾರಿ ಸಂಸ್ಥೆ NSIC ದೆಹಲಿ ಮತ್ತು ISO ನೋಂದಾಯಿಸಲಾಗಿದೆ. ಇದರಲ್ಲಿ ಮುಂದಿನ ಒಂದು ವರ್ಷದ ಕೋರ್ಸ್‌ಗಳನ್ನು ನಡೆಸಲಾಗುತ್ತದೆ

Motor Vehicle, Welding, Electrician, Plumbing, Computer Applications, Diesel Mechanic, AC & Refrigerator

ಖಾದಿಯಾನ್ ಹೊರಗಿನಿಂದ ಬರುವ ಅಹ್ಮದಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಮತ್ತು ಮೆಸ್ ವ್ಯವಸ್ಥೆಗಳು ಲಭ್ಯವಿದೆ. ವಸತಿ ಮತ್ತು ಆಹಾರಕ್ಕಾಗಿ ಯಾವುದೇ ರೀತಿಯ ಶುಲ್ಕವಿಲ್ಲ. ಸುಲಭ ಕಂತುಗಳಲ್ಲಿ ಕೋರ್ಸ್ ಬೋರ್ಡ್ ಶುಲ್ಕವನ್ನು ಮಾತ್ರ ವಿಧಿಸಲಾಗುತ್ತದೆ. ತಮ್ಮ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಲು ಸಾಧ್ಯವಾಗದ ಅಥವಾ 8 ಮತ್ತು 10 ನೇ ನಂತರ ತಾಂತ್ರಿಕ ಕೋರ್ಸ್‌ಗಳನ್ನು ಮಾಡಲು ಸಿದ್ಧರಿರುವ ಅಹ್ಮದಿ ಯುವಕರು ಪ್ರವೇಶಕ್ಕಾಗಿ ಶೀಘ್ರದಲ್ಲೇ ಸಂಪರ್ಕಿಸಿ. ಅಹ್ಮದಿ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನೂ ನೀಡಲಾಗುತ್ತದೆ. ಇದಲ್ಲದೆ, English Speaking ಮತ್ತು Personality Development (ವ್ಯಕ್ತಿತ್ವ ವಿಕಸನ) ನ ತರಗತಿಗಳನ್ನು ಸಹ ಪ್ರತಿದಿನ ತೆಗೆದುಕೊಳ್ಳಲಾಗುತ್ತದೆ. 2025–2026 ರ ಹೊಸ ಅಧಿವೇಶನಕ್ಕೆ ಪ್ರವೇಶ ಪ್ರಾರಂಭವಾಗಿದೆ. ಇದರ ತರಗತಿಗಳು ಜುಲೈ 16, 2025 ರಿಂದ ಪ್ರಾರಂಭವಾಗುತ್ತವೆ.

ಹೆಚ್ಚಿನ ಮಾಹಿತಿಗಾಗಿ ನೀವು ಈ ಕೆಳಗಿನ ಸಂಖ್ಯೆಗಳು ಮತ್ತು ಈಮೇಲ್ ಐಡಿಯನ್ನು ಸಂಪರ್ಕಿಸಬಹುದು:

darulsanaat.qadian@gmail.com

9872725895, 8604024043

(ಪ್ರಾಂಶುಪಾಲ ದಾರುಸ್ಸನಾತ್ ಖಾದಿಯಾನ್)

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2025 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 24, 25 ಮತ್ತು 26ನೇ ಅಕ್ಟೋಬರ್ 2025 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಪ್ರಮುಖ ಪ್ರಕಟಣೆ: ಅಹ್ಮದಿ ವಿದ್ಯಾರ್ಥಿಗಳ ಗಮನಕ್ಕೆ

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಪವಿತ್ರ ವಿದ್ಯಾಸಂಸ್ಥೆಯಾಗಿದೆ. ಅಲ್ಲಿ ಇಲ್ಲಿಯವರೆಗೆ ನೂರಾರು ಉಲಮಾಅ್ ಮತ್ತು ಮುಬಲ್ಲಿಗ್ ನವರು (ವಿದ್ವಾಂಸರು) ವಿದ್ಯಾವಂತರಾಗಿ ಇಸ್ಲಾಮಿನ ನಿಜವಾದ ಶಿಕ್ಷಣಗಳನ್ನು ಲೋಕದ ಮೂಲೆ ಮೂಲೆಯವರೆಗೆ ತಲುಪಿಸುವ ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಅ) ಅವರು ಹಲವಾರು ಸಂದರ್ಭಗಳಲ್ಲಿ ಅಹ್ಮದಿ ವಿದ್ಯಾರ್ಥಿಯರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ವಿದ್ಯಾಸಂಸ್ಥೆಯಿಂದ ಶಿಕ್ಷಣ ಪಡೆದು ಸಂಘಟನೆಯ ಸೇವೆ ಸಲ್ಲಿಸಲು ಗಮನ ಸೆಳೆದಿದ್ದಾರೆ. ಆದ್ದರಿಂದ ಸಯ್ಯಿದುನಾ ಹುಝೂರೆ ಅನ್ವರ್(ಅಅಬಅ) ರವರ ನಿರ್ದೇಶನಗಳ ಪ್ರಕಾರ ಹೆಚ್ಚಿನ ಸಂಖ್ಯೆಯಲ್ಲಿ ವಾಖಿಫೀನ್ ನೌ ಮತ್ತು ವಾಖಿಫೀನೇತರರು ವಿದ್ಯಾರ್ಥಿಗಳು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆದು ಧಾರ್ಮಿಕ ಜ್ಞಾನ ಪಡೆದು ಸಂಘಟನೆಗೆ ಸೇವೆ ನೀಡಲು ಮುಂದಾಗಬೇಕಾಗಿದೆ. ಹೀಗೆ ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಬಯಸುವವರು– ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ವಿಭಾಗದೊಡನೆ ಸಂಪರ್ಕಿಸಿರಿ. ಶೀಘ್ರ, ಅತೀ ಶೀಘ್ರವಾಗಿ ಜಾಮಿಯಾ ಅಹ್ಮದಿಯಾಗೆ ಪ್ರವೇಶ ಅರ್ಜಿ ತುಂಬಿ ದಿನಾಂಕ: 30 ಜೂನ್ ವರೆಗೆ ದಫ್ತರ್ ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ಗೆ ಕಳುಹಿಸತಕ್ಕದ್ದು.

ಪ್ರವೇಶ ಪಡೆಯಲು ಕೆಳಗೆ ನಮೂದಿಸಿದ ಷರತ್ತುಗಳಿವೆ:

(1) ಮೆಟ್ರಿಕ್ ಪಾಸ್ ವಿದ್ಯಾರ್ತಿಗಳಿಗಾಗಿ ವಯಸ್ಸು ಮಿತಿ 17 ವರ್ಷ ಮತ್ತು +2 ಪಾಸ್ ಆದವರಿಗೆ ವಯೋಮಿತಿ 19 ವರ್ಷ.

(2) ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆಯಲು ನ್ಯಾಷನಲ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ ವಿದ್ಯಾರ್ಥಿಗಳ ಸಂದರ್ಶನ (Interview) ಮತ್ತು ಲಿಖಿತ ಪರೀಕ್ಷೆ (written test) ತೆಗೆದುಕೊಳ್ಳಲಾಗುವುದು ಮತ್ತು ಜಾಮಿಯಾ ಅಹ್ಮದಿಯಾಗಾಗಿ ಅವರನ್ನು Select ಮಾಡಿಕೊಳ್ಳುವುದು. ಲಿಖಿತ ಪರೀಕ್ಷೆಯಲ್ಲಿ ಪವಿತ್ರ ಖುರ್‌ಆನ್, ಇಸ್ಲಾಂ, ಅಹ್ಮದಿಯತ್, ಧಾರ್ಮಿಕ ಜ್ಞಾನ, ಉರ್ದು, ಇಂಗ್ಲೀಷ್, ಸಾಮಾನ್ಯ ಜ್ಞಾನ (General Knowledge) ಕುರಿತು ಪ್ರಶ್ನೆಗಳನ್ನು ಇರಿಸಲಾಗುವುದು.

(3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ವಿದ್ಯಾರ್ತಿಗಳಿಗೆ ನೂರ್ ಹಾಸ್ಪಿಟಲ್ ಖಾದಿಯಾನ್‌ನಿಂದ ಆರೋಗ್ಯ ತಪಾಸಣೆ (Medical Test) ನಡೆಸಲಾಗುವುದು. ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಆರೋಗ್ಯ ತಪಾಸಣೆಯಲ್ಲಿ ಪಾಸಾದವರ ವಿದ್ಯಾರ್ಥಿಗಳನ್ನು ಸಯ್ಯಿದುನಾ ಹುಝೂರೆ ಅನ್ವರ್(ಅಬಅ) ಅವರ ಅನುಮತಿ ಪಡೆದು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ನೀಡಲಾಗುವುದು.

(4) ಪದವಿದಾರರು (Gradudate) ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶಕ್ಕಾಗಿ ಆದ್ಯತೆ ನೀಡಲಾಗುವುದು.

**Addmission Form ಅನ್ನು E-Mail ಮೂಲಕ ಪಡೆಯಲು:**

**waqfenau@qadian.in**

**WAQE-E-NAU DEPARTMENT (NAZARAT TALEEM)**

**DARUL BALAGH, CIVIL LINE, QADIAN.**

**Distt. GURDASPUR, PUNJAB (INDIA), PIN: 143516**

**CONTACT: 01872–500975, 9988991775**

**(ಸದರ್ ನ್ಯಾಷನಲ್ ಕೇರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.06, Thursday, 05 June 2025, Issue No. 23

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ದೃಷ್ಟಿಯಲ್ಲಿ ಈ ಉದ್ದೇಶಗಳಿದ್ದವು: ಮಹಿಳೆಯರು ತಮ್ಮ ಹಾಗೂ ಇತರ ಮಹಿಳೆಯರ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಅವರಿಗೆ ತಮ್ಮದೇ ಆದ ಒಂದು ಸಂಸ್ಥೆ ಇರಬೇಕು. ಅದರ ಕೆಲವು ನಯಮಾವಳಿ ಇರಬೇಕು. ಅವರು ಜಲ್ಸಗಳಲ್ಲಿ ಇಸ್ಲಾಮಿನ ಸಮಸ್ಯೆಗಳ ಕುರಿತು ತಾವೇ ಬರೆದಂತಹ ಲೇಖನಗಳನ್ನು ಓದಬೇಕು.

ಅವರು ಇಸ್ಲಾಮ್ ಧರ್ಮದ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಬೇಕು. ಸಂಸ್ಥೆಯ ಮಹಿಳೆಯರ ಎಲ್ಲಾ ಚಟುವಟಿಕೆಗಳು ಖಲೀಫರು ತಯಾರಿಸಿದ ಯೋಜನೆಗಳ ಪ್ರಕಾರ, ಅದರ ಪ್ರಗತಿಗೋಸ್ಕರ ಇರಬೇಕು. ಜಮಾಅತ್ತಿನ ಐಕ್ಯತೆಗಾಗಿ ಅವರು ಧರ್ಮದ ತತ್ವಗಳಂತೆ ಎಲ್ಲಾ ರೀತಿಯ ತಯಾರಿಗಳಿಗಾಗಿ ಸಿದ್ಧರಿರಬೇಕು ನೈತಿಕ ಹಾಗೂ ಆಧ್ಯಾತ್ಮಿಕ ಸುಧಾರಣೆ ಹಾಗೂ ಅದರ ಮಾರ್ಗಗಳ ಬಗ್ಗೆ ಚಿಂತಿಸಬೇಕು. ಮಕ್ಕಳ ತರಬೇತಿಯ ವಿಷಯದಲ್ಲಿ ತಮ್ಮ ಹೊಣೆಗಾರಿಕೆಗಳನ್ನು ವಿಶೇಶವಾಗಿ ತಿಳಿದಿರಬೇಕು. ಮಕ್ಕಳಿಗೆ ಅವರ ತಾಯಿಯಂದಿರು ಧಾರ್ಮಿಕ ಜೀವನವು ಮಾದರಿಯಾಗಿರಬೇಕು. ಅವರು ಕಷ್ಟಗಳನ್ನು ಸಹಿಸುವಂತೆ ಮಾಡಬೇಕು. ಧರ್ಮದ ಸಮಸ್ಯೆಗಳ ಬಗ್ಗೆ ಅವರಿಗೆ ಮಾಹಿತಿ ನೀಡಬೇಕು. ಅವರಲ್ಲಿ ಅಲ್ಲಾಹ್, ಪ್ರವಾದಿ(ಸ), ಮಸೀಹ್ ಮೌಊದ್ ಮತ್ತು ಖಲೀಫರೊಡನೆ ಪ್ರೀತಿ ಹಾಗೂ ಅನುಸರಣೆಯ ಭಾವನೆಯನ್ನು ಬೆಳೆಸಬೇಕು. ಅವರಲ್ಲಿ ನೀವು ಬಲಿದಾನದ ಬಗ್ಗೆ ಉತ್ಸಾಹವನ್ನು ಬೆಳೆಸಬೇಕು. ಸಂಸ್ಥೆಯ ಸದಸ್ಯರು ಪರಸ್ಪರ ಸಹಕಾರ ನೀಡುವ ಮೂಲಕ ಕಾರ್ಯಪ್ರವೃತ್ತರಾಗಬೇಕು ಮತ್ತು ಇತರರ ತಪ್ಪುಗಳನ್ನು ಕ್ಷಮಿಸಬೇಕು. ತಾಳ್ಮೆ ಮತ್ತು ಶೌರ್ಯದ ಗುಣಗಳನ್ನು ಬೆಳೆಸಬೇಕು. ಜನರ ಅಪಹಾಸ್ಯ ಹಾಗೂ ಟೀಕೆಗಳನ್ನು ಧೈರ್ಯದಿಂದ ಎದುರಿಸುವ ಗುಣ ಬೆಳೆಸಬೇಕು. ಏಕೆಂದರೆ ಅವರು ಇತರ ಮಹಿಳೆಯರಿಗೆ ಮಾದರಿಯಾಗಿರುವಂತೆ ಇರಬೇಕು. ಈ ಉದ್ದೇಶ ಈಡೇರಿಸುವುದಕ್ಕಾಗಿ ಇತರ ಮಹಿಳೆಯರನ್ನು ಸಹಪಾಠಿಗಳನ್ನಾಗಿ ಮಾಡಿಕೊಳ್ಳಬೇಕು. ಜಮಾಅತ್ ಎಂಬುದು ಯಾವುದೇ ಒಂದು ವಿಶೇಶ ಗುರುವಿನ ಹೆಸರಲ್ಲ. ಹಿರಿಯರು, ಕಿರಿಯರು, ಬಡವರು, ಬಲ್ಲಿದವರು ಎಲ್ಲರ ಹೆಸರು ಜಮಾಅತ್ ಆಗಿದೆ. ಪರಸ್ಪರ ಪ್ರೀತಿ ಮತ್ತು ಸಮಾನತೆಯನ್ನು ಬೆಳೆಸುವ ಪ್ರಯತ್ನ ಮಾಡಬೇಕು. ಎಲ್ಲಾ ಸಹಕಾರ ಮತ್ತು ಜಯಗಳು ಅಲ್ಲಾಹನಿಂದ ಬರುತ್ತವೆ. ಅದಕ್ಕಾಗಿ ಪ್ರಾರ್ಥಿಸಬೇಕು. ಆ ದೈವಿಕ ಉದ್ದೇಶಗಳು ನಮ್ಮ ಜನ್ಮದಲ್ಲಿ ದೃಷ್ಟಿಯಲ್ಲಿರಿಸಿಕೊಳ್ಳಬೇಕು. ಅದರಲ್ಲಿ ಪ್ರಾರಂಭಿಕವಾಗಿ 13 ಮಹಿಳೆಯರು ಸಹಿ ಹಾಕಿದರು. ಅವರು ಹುಝೂರ್(ರ) ರವರ ಹೇಳಿಕೆಯ ಪ್ರಕಾರ ಹಝ್ರತ್ ಉಮ್ಮುಲ್ ಮೂಮಿನೀನ್(ರ) ಅವರ ಮನೆಯಲ್ಲಿ ಒಟ್ಟು ಗೂಡಿದರು. ಅವರನ್ನು ಹುಝೂರ್(ರ) ಉದ್ದೇಶಿಸಿ ಮಾತನಾಡಿದರು: ಅದರೊಂದಿಗೆಯೇ ಲಜ್‌ನಾ ಸಂಘಟನೆ ಕಾರ್ಯರೂಪಕ್ಕೆ ಬಂದಿತು. ಹುಝೂರ್(ರ) ಅವರಿಗೆ ಅಲ್ಲಾಹನು ದೇವವಾಣಿಯ ಮೂಲಕ ಹೇಳಿದನು – ನೀವು ಶೇ50 ರಷ್ಟು ಮಹಿಳೆಯರನ್ನು ಸುಧಾರಿಸಿದರೆ ಇಸ್ಲಾಮ್ ಧರ್ಮಕ್ಕೆ ಪ್ರಗತಿ ಲಭಿಸುವುದು. ಅವರು ಲಜ್‌ನಾ ಇಮಾಅಲ್ಲಾರವರ ತರಬೇತಿ ಹಾಗೂ ಸಂಘಟನೆಯ ಕಡೆಗೆ ಸದಾ ಹೆಚ್ಚಿನ ರೀತಿಯಲ್ಲಿ ಗಮನ ವಹಿಸುತ್ತಿದ್ದರು.

ಆದುದರಿಂದ ನೀವು ಈ ಉದ್ದೇಶಗಳನ್ನು ಸದಾ ದೃಷ್ಟಿಯಲ್ಲಿರಿಸಿಕೊಳ್ಳಿರಿ. ಅದಕ್ಕಾಗಿಯೇ ಲಜ್‌ನಾ ಇಮಾಅಲ್ಲಾಹ್‌ವನ್ನು ಸ್ಥಾಪಿಸಲಾಯಿತು. ಅದಕ್ಕಾಗಿ ಖಲೀಫರ ಪ್ರಾರ್ಥನೆಗಳು ಮತ್ತು ಮಾರ್ಗದರ್ಶನವು ಅತ್ಯಂತ ಮುಖ್ಯವಾಗಿದೆ. ನೀವು ಈ ಪ್ರಾಥಮಿಕ ಹಂತದ ಉಪದೇಶಗಳನ್ನು ಪಾಲಿಸಿದರೆ ಇನ್‌ಶಾಅಲ್ಲಾಹ್, ನಿಮ್ಮ ಎಲ್ಲಾ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಶಸ್ವಿಯಾಗುವುವು. ನಿಮ್ಮ ಪ್ರತಿ ಹೆಜ್ಜೆಯು ಪ್ರಗತಿಯ ಕಡೆಗೆ ಸಾಗುವುದು. ಅಲ್ಲಾಹನು ನಿಮಗೆ ಆ ಭಾಗ್ಯ ದಯಪಾಲಿಸಲಿ– ಆಮೀನ್.

ವಸ್ಸಲಾಮ್
ಮಿರ್ಝಾ ಮಸ್‌ರೂರ್ ಅಹ್ಮದ್
ಖಲೀಫತುಲ್ ಮಸೀಹ್ ಖಾಮಿಸ್

## ವೈದ್ಯ (MBBS) ಹುದ್ದೆಗೆ ಜಾಹೀರಾತು.
## ನೂರ್ ಆಸ್ಪತ್ರೆ ಖಾದಿಯಾನ್
### ಅಗತ್ಯವಿರುವ ಡೇಟಾ / ಶೈಕ್ಷಣಿಕ ಅರ್ಹತೆಗಳು / ಅನುಭವ

(1) ಅಭ್ಯರ್ಥಿಯು ರೊಟೇಟರಿ ಇಂಟರ್ನ್‌ಶಿಪ್‌ನೊಂದಿಗೆ MBBS ಪದವಿಯನ್ನು ಪೂರ್ಣಗೊಳಿಸಿರಬೇಕು.
(2) ಯಾವುದೇ ಪ್ರಾಂತ್ಯದ ವೈದ್ಯಕೀಯ ಮಂಡಳಿಯಲ್ಲಿ ನೋಂದಾಯಿಸಿರಬೇಕು.
(3) ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕನಿಷ್ಠ 02 ವರ್ಷಗಳ ಅನುಭವವಿರಬೇಕು.
(4) 30 ವರ್ಷಕ್ಕಿಂತ ಹೆಚ್ಚಿರಬಾರದು. (ಸಂದರ್ಭಗಳಿಗೆ ಅನುಗುಣವಾಗಿ ವಿನಾಯಿತಿಗಳನ್ನು ಪರಿಗಣಿಸಬಹುದು.)
(5) ನಿಯಮಗಳ ಪ್ರಕಾರ ಪ್ರಯೋಜನಗಳೊಂದಿಗೆ ಗ್ರೇಡ್ 20052–561–24540–784–33948–884–41020.
(6) ಅಭ್ಯರ್ಥಿಯು ಉತ್ತಮ ಆರೋಗ್ಯದಿಂದಿರಬೇಕು. ಉತ್ತಮ ಧಾರ್ಮಿಕ ಮತ್ತು ನೈತಿಕ ಗುಣಗಳು ಉತ್ತಮವಾಗಿರಬೇಕು. ರೋಗಿಗಳು ಮತ್ತು ಸಹೋದ್ಯೋಗಿಗಳೊಂದಿಗೆ ಸಭ್ಯವಾಗಿ ವರ್ತಿಸಬೇಕು.
(7) ಪುರುಷ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

### ಅಗತ್ಯ ಸೂಚನೆಗಳು:

(1) ಬದರ್ ವಾರಪತ್ರಿಕೆಯಲ್ಲಿ ಕೊನೆಯ ಪ್ರಕಟಣೆ ಪ್ರಕಟವಾದ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.
(2) ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ತಮ್ಮ ಜಿಲ್ಲಾ ಅಮೀರ್/ಸ್ಥಳೀಯ ಅಮೀರ್/ಸದರ್ ಜಮಾಅತ್/ಮುಬಲ್ಲಿಗ್ ಇಂಚಾರ್ಜ್‌ಗಳ ಸಹಿ ಮತ್ತು ಮುದ್ರೆಯೊಂದಿಗೆ ಮುದ್ರಿತ ನಮೂನೆಯಲ್ಲಿ ಸಲ್ಲಿಸಬೇಕು.
(3) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ಖಾದಿಯಾನ್‌ನ ನೂರ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯವಂತ ಮತ್ತು ಸದೃಢರಾಗಿರುವ ಅಭ್ಯರ್ಥಿ ಮಾತ್ರ ಸೇವೆಗೆ ಅರ್ಹರಾಗಿರುತ್ತಾರೆ.
(4) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.
(5) ಸಂದರ್ಶನದ ಸಮಯದಲ್ಲಿ ನಿಮ್ಮ ಮೂಲ ಶೈಕ್ಷಣಿಕ ಪ್ರಮಾಣಪತ್ರಗಳನ್ನು ನಿಮ್ಮೊಂದಿಗೆ ತರುವುದು ಅವಶ್ಯಕ.

**ಗಮನಿಸಿ:** ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***
ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516
ಮೊಬೈಲ್: 09682587713, 9888232530, 9682627592
ಕಛೇರಿ: 01872–501130
ಇ–ಮೇಲ್: diwan@qadian.in

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.